DOP 15th of every month from Udupi HPO
ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.
ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.
ಫೋನ್ : 2531493 (O), 2530851 (R), ಮೊಬೈಲ್ : 94484 37893

# ಶ್ರೀ ಶಾರದಾ

**ಮಾಸಪತ್ರಿಕೆ – 15 ಜುಲೈ 2009**

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102. ☎ 2520754
ಸಂಪುಟ-9 ಸಂಚಿಕೆ-7 ಪುಟಗಳು-6 Registered Under No.J/UDP/1260/2009-2011 Dated from 01-12-2008 to 30-11-2011.

## ಕರ್ನಾಟಕ ಬ್ಯಾಂಕ್‌ನ ಚಯರ್‌ಮ್ಯಾನ್ ಮತ್ತು ಎಂ.ಡಿ.ಯವರಿಗೆ ಅಭಿನಂದನೆ



ಕರ್ನಾಟಕ ಬ್ಯಾಂಕ್‌ನ ಚಯರ್‌ಮ್ಯಾನ್ ಆಗಿ ಪುನರಾಯ್ಕೆಗೊಂಡ ಶ್ರೀ ಅನಂತಕೃಷ್ಣ ಮತ್ತು ವ್ಯವಸ್ಥಾಪನಾ ನಿರ್ದೇಶಕರಾಗಿ ಭಡ್ತಿ ಪಡೆದ ಶ್ರೀ ಜಯರಾಮ ಭಟ್‌ರವರನ್ನು ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷ ಶ್ರೀ ಎನ್. ಕೆ. ಜಗನ್ನಿವಾಸ ರಾವ್, ಉಪಾಧ್ಯಕ್ಷ ಶ್ರೀ ಸಿ.ಎಸ್.ರಾವ್, ಕಾರ್ಯದರ್ಶಿ ಕರುಣ್‌ರಾವ್ ಬೆಳ್ಳೆ, ನಿರ್ದೇಶಕರುಗಳಾದ ಶ್ರೀ ಕ್ಯಾದಿಗೆ ಹರ್ಷಕುಮಾರ್, ಕನಕವಲ್ಲಿ ಹರ್ಷಕುಮಾರ್, ಚೇತನ್‌ಶರ್ಮ, ಅನಿಲ್‌ರಾವ್ ಬಿ.ಎಸ್, ಎಂ. ಆರ್. ವಾಸುದೇವ್, ಸಂತೋಷ್‌ಕುಮಾರ್ ಯು. ಮತ್ತಿತರರು ಉಪಸ್ಥಿತರಿದ್ದರು.

ವರದಿ : ನಾಗರಾಜ್ ವರ್ಕಾಡಿ

## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ.) ಮಂಗಳೂರು ಇದರ ಪುತ್ತೂರು ಶಾಖೆಯ ಉದ್ಘಾಟನೆ

ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ.), ಮಂಗಳೂರು ಇದರ ಪುತ್ತೂರು ಶಾಖೆಯು ದಿನಾಂಕ 09-07-2009ರಂದು ಧಾರ್ಮಿಕ ವಿಧಿ-ವಿಧಾನಗಳೊಂದಿಗೆ ಸಾಂಕೇತಿಕವಾಗಿ ''ಪುತ್ತೂರು ಸೆಂಟರ್'' ಕಟ್ಟಡದ 1ನೇ ಮಾಳಿಗೆಯಲ್ಲಿ ಶುಭಾರಂಭಗೊಂಡಿತು.

ಈ ಸಂದರ್ಭದಲ್ಲಿ-ಶ್ರೀ ರಾಜಗೋಪಾಲ್‌ರಾವ್-ಅಧ್ಯಕ್ಷರು, ಶ್ರೀ ಎಮ್.ಎಸ್.ರಘುನಾಥ ರಾವ್-ಉಪಾಧ್ಯಕ್ಷರು, ಶ್ರೀ ಸಿ.ಎಸ್.ರಾವ್-ಸಹಕಾರ ಸಂಘದ ಸಲಹೆಗಾರರು ಹಾಗೂ ನಿರ್ದೇಶಕರುಗಳಾದ ಶ್ರೀ ಅನಿಲ್‌ರಾವ್, ಶ್ರೀ ಪ್ರದೀಪ್ ರಾವ್, ಶ್ರೀ ಪ್ರವೀಣ್ ಕುಮಾರ್ ಅದ್ಯಪಾಡಿ, ಶ್ರೀ ನಟರಾಜ್‌ರಾವ್, ಶ್ರೀ ಕರುಣ್‌ರಾವ್ ಬೆಳ್ಳೆ, ಶ್ರೀ ಜಗನ್ನಿವಾಸ ರಾವ್ ಮತ್ತು ಕಾರ್ಯದರ್ಶಿ-ಮಮತಾರಾವ್ ಹಾಗೂ ಶಾಖಾಧಿಕಾರಿ ಶ್ರೀ ಎನ್.ಎಸ್.ಶಾಂತಾ ರಾವ್ ಉಪಸ್ಥಿತರಿದ್ದರು.

ಬೆಳ್ತಂಗಡಿ ಹಾಗೂ ಕಾರ್ಕಳದಲ್ಲಿ ಸಂಘದ ಶಾಖೆಯನ್ನು ತೆರೆಯುವ ಉದ್ದೇಶ ಸಂಘಕ್ಕಿದ್ದು ಈ ಬಗ್ಗೆ ಪೂರ್ವಭಾವಿ ಸಿದ್ಧತೆ ನಡೆಯುತ್ತಿದೆ. ಆದಷ್ಟು ಶೀಘ್ರದಲ್ಲಿ ಶಾಖೆಗಳನ್ನು ತೆರೆಯಲಾಗುವುದು ಎಂದು ಸಂಘದ ಸುದ್ದಿ ಪ್ರಕಟಣೆ ತಿಳಿಸಿದೆ.

## ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ ವಿಶೇಷ ಸರ್ವಸದಸ್ಯರ ಸಭೆ-ಶೇ.10 ಡಿವಿಡೆಂಡ್ ನೀಡಲು ನಿರ್ಧಾರ

ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯ ವಿಶೇಷ ಸರ್ವಸದಸ್ಯರ ಸಭೆಯು ತಾ.11-7-2009ನೇ ಶನಿವಾರ ಅಪರಾಹ್ನ 3-30 ಗಂಟೆಗೆ ಸೊಸೈಟಿಯ ಕಛೇರಿ ಇರುವ ಭೂವರಾಹ ಸಂಕೀರ್ಣ ಸಭಾಭವನದಲ್ಲಿ ನಡೆಯಿತು. ವರ್ಷ 2007-08ನೇ ಸಾಲಿನ ಲೆಕ್ಕಪರಿಶೋಧಕರ ವರದಿಯ ಅಂಗೀಕಾರ ಹಾಗೂ ನಿವ್ವಳ ಲಾಭದ ವಿಂಗಡಣೆಗಾಗಿ ವಿಶೇಷ ಸಭೆಯನ್ನು ಕರೆಯಲಾಗಿತ್ತು.

ಸೊಸೈಟಿಯ ಅಧ್ಯಕ್ಷರಾದ ಶ್ರೀ ಎಮ್. ಸದಾನಂದ ರಾಯರು ಸದಸ್ಯರನ್ನು ಸ್ವಾಗತಿಸಿ ಸೊಸೈಟಿಯ 2008-09ನೇ ವರ್ಷದ ಬೆಳವಣಿಗೆಯನ್ನು ವಿವರಿಸಿದರು. ಅಲ್ಲದೇ ಸೊಸೈಟಿಯು ಹಿಂದಿನ ಸಾಲಿಗಿಂತ ಹೆಚ್ಚಿನ ಲಾಭಗಳಿಸಿದೆ ಎಂದು ತಿಳಿಸಿ ಸದಸ್ಯರು ನೀಡಿದ ಸಹಕಾರಕ್ಕೆ ಧನ್ಯತೆ ಸಲ್ಲಿಸಿದರು.

ಕಾರ್ಯದರ್ಶಿ ಶ್ರೀ ಕೆ.ವೇಣುಗೋಪಾಲ ರಾವ್ 2007-08ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನು ಸಭೆಯ ಮುಂದಿಟ್ಟರು. ಸಭೆಯು ಅದನ್ನು ಸರ್ವಾನುಮತದಿಂದ ಅಂಗೀಕರಿಸಿತು.

ನಂತರ ನಿವ್ವಳ ಲಾಭದ ವಿಂಗಡಣೆಯಾಗಿ ಸೊಸೈಟಿಯ ಸದಸ್ಯರಿಗೆ ಶೇ.10 ಡಿವಿಡೆಂಡ್ ನೀಡಲು ನಿರ್ಣಯಿಸಲಾಯಿತು. ಆರಂಭದಲ್ಲಿ ಕು। ಅಪರ್ಣಾ ಪ್ರಾರ್ಥಿಸಿ, ಕೊನೆಯಲ್ಲಿ ಸೊಸೈಟಿಯ ನಿರ್ದೇಶಕ ಶ್ರೀ ವೈ. ಮೋಹನ ರಾವ್ ವಂದಿಸಿದರು. ಸೊಸೈಟಿಯ ಉಪಾಧ್ಯಕ್ಷ ಶ್ರೀ ಸಿ.ಎಸ್.ರಾವ್ ಹಾಗೂ ನಿರ್ದೇಶಕರೆಲ್ಲರೂ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಇನ್ನಾ ದಿನೇಶ್ ರಾವ್ ಸ್ಮರಣಾರ್ಥ ಬೆಳ್ಮಣ್, ಪಲಿಮಾರು ಇನ್ನಾಗಳಲ್ಲಿ 'ಸ್ಪೋಕನ್ ಇಂಗ್ಲಿಷ್' ಕೋರ್ಸ್ ಮತ್ತು ಉಚಿತ ನೋಟ್ ಪುಸ್ತಕ ವಿತರಣೆ




ತಾ.13-05-2009ರಿಂದ 29-05-2009ರ ವರೆಗೆ ಬೆಳ್ಮಣ್ ಪದವಿಪೂರ್ವ ಕಾಲೇಜಿನಲ್ಲಿ 3 ತರಗತಿಗಳು ಹಾಗೂ ಪಲಿಮಾರಿನಲ್ಲಿ ಒಂದು ಇಂಗ್ಲೀಷ್ ಸ್ಪೋಕನ್ ಕೋರ್ಸ್ ಎಬಿಸಿಡಿಇ ಟ್ರಸ್ಟ್ ಇನ್ನಾ ಹಾಗೂ ಡಾ। ದಯಾನಂದ ಎಸ್.ರಾವ್‌ರವರ ಸಂಯುಕ್ತ ಸಹಕಾರದೊಂದಿಗೆ ಬೆಳ್ಮಣ್ ಜೇಸಿಯ ಪ್ರಾಯೋಜಕತ್ವದಲ್ಲಿ ನಡೆದಿದ್ದು ಶ್ರೀ ಗುಣಕರ ಶೆಟ್ಟಿ, ಶ್ರೀ ರಾಜೀವ್ ನಾಯಕ್, ಶ್ರೀ ಶ್ರೀನಿವಾಸ ಭಟ್, ಶ್ರೀ ಪುಂಡರೀಕಾಕ್ಷ ಕೊಡಂಚ, ಶ್ರೀ ಶಿವ ಪ್ರಸಾದ ಶೆಟ್ಟಿ, ಶ್ರೀ ಪ್ರತಾಪ ಶೆಟ್ಟಿಯವರು ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ಈ ಶಿಬಿರದ ಸಮಾರೋಪ ಹಾಗೂ ಉಚಿತ ನೋಟ್ ಪುಸ್ತಕಗಳನ್ನು ಹಂಚುವ ಕಾರ್ಯಕ್ರಮಗಳನ್ನು ಬೆಳ್ಮಣ್, ಪಲಿಮಾರು ಹಾಗೂ ಇನ್ನಾದಲ್ಲಿ ಹಮ್ಮಿಕೊಳ್ಳಲಾಯಿತು. ಬೆಳ್ಮಣ್ ಜೇಸಿ ಅಧ್ಯಕ್ಷೆ ಜಯಂತಿ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಜೇಸಿ ಗಣಪತಿ ಆಚಾರ್ ಹಾಗೂ ಜೇಸಿ ಎನ್.ಸುಧಾಕರ ರಾವ್‌ರವರ ನಿರ್ದೇಶನದ ಜೇಸಿ ಚಾರಿಟೇಬಲ್ ಟ್ರಸ್ಟ್‌ನ ಸಹಕಾರದೊಂದಿಗೆ, ಜೇಸಿ ಸದಸ್ಯರ ಸಹಭಾಗಿತ್ವದಲ್ಲಿ ಕಾರ್ಯಕ್ರಮಗಳು ಮೂಡಿಬಂದವು. ಜೇಸಿ ವಲಯ ಉಪಾಧ್ಯಕ್ಷ ರಾಜೇಶ್ ಶೆಣೈ, ವಲಯ ನಿರ್ದೇಶಕ ಉದಯ್ ಕುಮಾರ್ ಶೆಟ್ಟಿ, ಶಿಕ್ಷಣ ಇಲಾಖೆ ಉಡುಪಿಯ ವಿಷಯ ಪರಿವೀಕ್ಷಣಾಧಿಕಾರಿ ಮುಕುಂದ ಭಟ್ ಹಾಗೂ ಸಿ.ಆರ್.ಪಿ. ವಸಂತ್‌ರವರು ಅತಿಥಿಗಳಾಗಿ ಭಾಗವಹಿಸಿ, ಇನ್ನಾ ದಿನೇಶ್ ರಾವ್‌ರವರನ್ನು ಸಂಸ್ಮರಿಸಿ ಅವರ ಮಕ್ಕಳ ಈ ಕೊಡುಗೆಯನ್ನು ಶ್ಲಾಘಿಸಿದರು.

ಡಾ। ಐ. ಶ್ರೀಕಾಂತ್‌ರಾವ್, ಶ್ರೀ ರತ್ನಾಕರ ರಾವ್, ಶ್ರೀಮತಿ ವಿಮಲ ಡಿ.ರಾವ್, ಶ್ರೀಮತಿ ಶಶಿರೇಖ ಆರ್.ರಾವ್, ಶ್ರೀಮತಿ ವೇದಾವತಿ ರಾವ್ ಹಾಗೂ ಶ್ರೀ ಲಕ್ಷ್ಮೀಕಾಂತ್‌ರಾವ್‌ರವರು ಈ ಕಾರ್ಯಕ್ರಮ ಯಶಸ್ವಿಗೊಳಿಸುವಲ್ಲಿ ಶ್ರಮಿಸಿದರು ಹಾಗೂ ಅತಿಥಿಗಳಾಗಿಯೂ ಭಾಗವಹಿಸಿದರು. ಕಾರ್ಯಕ್ರಮ ನಿರ್ದೇಶಕರಾಗಿ ಜೇಸಿ ಗಣಪತಿ ಕಾಮತ್, ದೀಪಕ್ ಕಾಮತ್, ನಿತೇಶ್ ಶೆಟ್ಟಿ, ಡಿ.ಟಿ. ಪಾಟೇಗಾರ್, ಸಂದೀಪ್ ಪೂಜಾರಿ, ರೋಶನ್ ಶೆಟ್ಟಿ, ಅನಿಲ್‌ಕುಮಾರ್ ಉಪಸ್ಥಿತರಿದ್ದರು. ಜೇಸಿ ತುಕಾರಾಮ್ ಶೆಟ್ಟಿಯವರು ಜೇಸಿ ಚಾರಿಟೇಬಲ್ ಟ್ರಸ್ಟ್‌ನ ಕಾರ್ಯವೈಖರಿ ಮತ್ತು ಈ ಕಾರ್ಯಕ್ರಮದ ಉದ್ದೇಶವನ್ನು ವಿವರಿಸಿದರು. ಜೇಸಿ ಸುಧಾಕರ್ ಆಚಾರ್ಯ ವಂದನಾರ್ಪಣೆ ಗೈದರು. ಈ ಇನ್ನಾ ದಿನೇಶ್ ರಾವ್ ಸ್ಮರಣಾರ್ಥ ಯೋಜನೆಯನ್ನು ಸಕಾಲದಲ್ಲಿ ಸತ್ಪಾತ್ರರಿಗೆ ಮುಟ್ಟಿಸುವಲ್ಲಿ ಬೆಳ್ಮಣ್ ಜೇಸಿಸ್ ಸಫಲವಾಯಿತು.

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು ಉಡುಪಿ**
**ಮಹಿಳಾ ವೇದಿಕೆ**

## ವರಮಹಾಲಕ್ಷ್ಮೀ ವ್ರತ

**ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ದೇವಸ್ಥಾನದಲ್ಲಿ ಸಾಮೂಹಿಕ ವರಮಹಾಲಕ್ಷ್ಮೀ ವ್ರತ ಆಚರಣೆಯು ತಾ.31-7-2009 ರಂದು ಶುಕ್ರವಾರ ಸಾಯಂಕಾಲ 4-00 ಗಂಟೆಗೆ ನೆರವೇರಲಿದೆ. ಭಾಗವಹಿಸುವ ಭಕ್ತ ಬಾಂಧವರು ಫಲಪುಷ್ಪ, ತುಳಸಿ, ವೀಳ್ಯ, ಕುಂಕುಮ, ಅರಸಿನ, ಸಣ್ಣ ಕಾಲುದೀಪ ಮೊದಲಾದ ಸಾಮಾಗ್ರಿಗಳೊಂದಿಗೆ (ಸಾಧ್ಯವಿದ್ದವರು ಮಧ್ಯಾಹ್ನ ಉಪವಾಸ ವಿದ್ದು) ಸಮಯಕ್ಕೆ ಸರಿಯಾಗಿ ಶ್ರೀ ಶಾರದಾ ಮಂಟಪಕ್ಕೆ ಆಗಮಿಸಿ ಸಹಕರಿಸಬೇಕೆಂದೂ, ಹಾಗೆಯೇ ಅಂದು ಸಂಜೆ ಶ್ರೀ ದೇವಸ್ಥಾನದಲ್ಲಿ ನಡೆಯುವ ಸಾಮೂಹಿಕ ಹೂವಿನ ಪೂಜಾ ಕಾರ್ಯಕ್ರಮದಲ್ಲಿಯೂ ಪಾಲ್ಗೊಳ್ಳಬೇಕೆಂದೂ ಸಂಘದ ಮಹಿಳಾ ವೇದಿಕೆಯ ಅಧ್ಯಕ್ಷರು ಮತ್ತು ಸಂಚಾಲಕರು ವಿನಂತಿಸಿದ್ದಾರೆ.**

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಯು. ಅರವಿಂದ ಕುಮಾರ್
ಎಚ್.ಎನ್. ಶ್ಯಾನುಭಾಗ್
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್
ರೂಪಾ ವಸಂತ ರಾವ್
ಕೆ. ವೇಣುಗೋಪಾಲ ರಾವ್
ಯು. ಪ್ರಫುಲ್ಲಚಂದ್ರ ರಾವ್



ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಲೇಖನಗಳು ಅಥವಾ ಪತ್ರಿಕೆಯ ಇತರ ಯಾವುದೇ ವಿಷಯಗಳ ಬಗ್ಗೆ ಯಾವುದೇ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.


## ಚಿಂತನ

ನನ್ನ ನೆರೆಮನೆಯ ಗೆಳೆಯನೊಬ್ಬ ಇತ್ತೀಚೆಗೆ ಪ್ರತಿದಿನ ಬೆಳಿಗ್ಗೆ ಅಂಗಡಿಗೆ ಹೋಗಿಬರುತ್ತಿದ್ದುದನ್ನು ಕಂಡು ನಾನು 'ಏನು?' ಎಂದು ವಿಚಾರಿಸಿದೆ. ಆಗ ಅವನೆಂದ -''ದನ ಮಾರಿದೆ. ಯಾಕಂದ್ರೆ... ನನ್ನ ಪತ್ನಿಗೆ ದನ, ದನದ ಮೂತ್ರ, ಸೆಗಣಿ ಮುಟ್ಟಿದರೆ 'ಅಲರ್ಜಿ'ಯಾಗುತ್ತದೆ. ವೈದ್ಯರಲ್ಲಿ ತೋರಿಸಿದಾಗ ದನದ ಹತ್ತಿರವೂ ಸುಳಿಯಬಾರದು ಎಂದು ಹೇಳಿ ಸುಮಾರು 300 ರೂಪಾಯಿಯ ಔಷಧಿ ಕೂಡಾ ಕೊಟ್ಟಿದ್ದಾರೆ. ಹೀಗೆ 3-4 ಬಾರಿ ಪುನರಾವರ್ತನೆಯಾದ ನಂತರ ದನ ಮಾರಿಬಿಟ್ಟೆ, ಈಗ ಪ್ಯಾಕೆಟ್ ಹಾಲು'' ಎಂದು ಪ್ಲಾಸ್ಟಿಕ್ ಲಕೋಟೆ ತೋರಿಸಿದ.


ನಮ್ಮ ವೇದ, ಪುರಾಣಗಳಲ್ಲಿ ಗೋವು-ಗೋಮಾತೆ-ಗೋಮೂತ್ರ-ಗೋಮಯ ಇವುಗಳ ಬಗ್ಗೆ ಇರುವ ಕಲ್ಪನೆ ಹಾಗೂ ನಮ್ಮ ವಿಜ್ಞಾನಿಗಳು ಇವುಗಳ ಬಗ್ಗೆ ಮಾಡಿದ ಸಂಶೋಧನೆ ಮತ್ತು ಅದರಲ್ಲಿರುವ ಔಷಧೀಯ ಗುಣಗಳ ಬಗ್ಗೆ ಮಾಡಿರುವ ಪರಿಶೋಧನೆಗಳಿಂದ ಈ ವಸ್ತುಗಳು ಮಾನವನಿಗೆ ಅತೀ ಪ್ರಾಮುಖ್ಯವಾದ ವಸ್ತುಗಳೆಂದು ತಿಳಿದುಕೊಂಡ ನನಗಂತೂ ಈ ವಿಚಾರ ಕೇಳಿ ಬಹಳ ಆಶ್ಚರ್ಯವಾಯಿತು. ಔಷಧಿಯಾಗಿ ಬಳಕೆಯಾಗುವ ಈ ವಸ್ತುಗಳನ್ನು ಕೊಡುವ, ಅಮೃತ ಸಮಾನವಾದ ಪೌಷ್ಠಿಕಾಂಶ ಇರುವ ಹಾಲು ನೀಡುವ ಗೋವನ್ನು ಮುಟ್ಟುವುದೇ ಇಂದು 'ಅಲರ್ಜಿ'ಯಾಗುವುದೆಂದು ವೈದ್ಯರೇ ಹೇಳಿದರೆಂದರೆ ಯೋಚಿಸಬೇಕಾದ ವಿಚಾರ.

ನನ್ನ ಆಪ್ತರಾದ ಹಿರಿಯ ನಿವೃತ್ತ ಅಧ್ಯಾಪಕರೊಬ್ಬರು ಹೇಳುತ್ತಿದ್ದ ಮಾತು-''ಮನೆಯಲ್ಲಿ ಸಾಕಲು ಒಂದು ಹಾಲು ಕೊಡುವ ದನ ಅಥವಾ ಮದ್ದಿನ ಬಾಟ್ಲಿ ಇದರಲ್ಲಿ ಯಾವುದಾದರೂ ಒಂದು ಆಯ್ಕೆ ನಮ್ಮದಾಗಿರಬೇಕು''. ಅಂದರೆ ಹಾಲು ಕರೆಯುವ ದನ ಮನೆಯಲ್ಲಿ ಇಲ್ಲದಿದ್ದರೆ ಮದ್ದಿನ ಬಾಟ್ಲಿ ಮತ್ತು ವೈದ್ಯರ ಸಲಹೆ ತಪ್ಪುವುದಿಲ್ಲವೆಂದು ಅರ್ಥ.

ಇದೀಗ ಮೇಲೆ ಹೇಳಿದ ವಿಚಾರ ಗಮನಿಸಿದಾಗ ಯಾವುದು ಸತ್ಯ? ಆಪ್ತರಾದ ಆ ಹಿರಿಯರ ಮಾತೇ? ಅಥವಾ ನನ್ನ ಗೆಳೆಯನ ವೈದ್ಯರ ಸಲಹೆಯ ಮಾತೇ? ಚಿಂತಿಸಬೇಕಾದ ವಿಚಾರವಲ್ಲವೇ?

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ಕಾಲು ಬಂದ ಮೇಲೆ ಆ ಮಕ್ಕಳು ವ್ರಜ ಭೂಮಿಯಲ್ಲಿ ಪುಟ್ಟ ಪುಟ್ಟ ಹೆಜ್ಜೆಗಳನ್ನಿಡುತ್ತಾ ಓಡಾಡತೊಡಗಿದರು. ಅವರ ಕಾಲ್ಗೆಜ್ಜೆಗಳ ಸದ್ದು ಎಲ್ಲ ಕಡೆ ಕೇಳಿಸಲಾರಂಭಿಸಿತು. ಗೋಪಿಯರು ಏನೇ ಕೆಲಸವಿದ್ದರೂ ಅದನ್ನು ಬಿಟ್ಟು ತಂತಮ್ಮ ಮನೆ ಬಾಗಿಲಿಗೆ ಓಡಿಬಂದು ಅವರ ಚಲನ ವಲನವನ್ನು ನೋಡುತ್ತಾ ನಿಲ್ಲುವರು. ಮನುಷ್ಯರೇ ಏಕೆ? ಮೃಗ, ಪಕ್ಷಿಗಳೂ ಅವರನ್ನು ನೋಡಲು ತವಕಿಸುವವು. ವಿಶೇಷವಾಗಿ ಹಸು, ಕರುಗಳು ಹುಲ್ಲು ತಿನ್ನುವುದನ್ನು ಬಿಟ್ಟು ಅವರತ್ತ



ನೋಡುವವು. ಕರುಗಳು ಹಾಲು ಕುಡಿಯುವುದನ್ನೂ ಮರೆತು ಬಿಡುವವು. ಮೈಯೆಲ್ಲ ಧೂಳು ಮೆತ್ತಿಕೊಂಡು ಬರುವ ಮಕ್ಕಳನ್ನು ನೋಡುವಾಗ ಯಶೋದೆ, ರೋಹಿಣಿಯರ ಸ್ತನಗಳಿಂದ ತಾನಾಗಿಯೇ ಹಾಲು ಸುರಿಯುವುದು. ಏಕೆ? ಹಸುಗಳ ಕೆಚ್ಚಲಿಂದಲೂ ಹಾಲು ಹರಿಯುವುದು. ಚೆನ್ನಾಗಿ ಓಡಾಡುವಂತಾದ ಮೇಲೆ ಅವರ ತುಂಟಾಟಗಳು ಅತಿಯಾಯಿತು. ಕರುಗಳ ಬಾಲ ಹಿಡಿದುಕೊಂಡು ಅವುಗಳು ಬೆಚ್ಚಿ ಓಡುವಾಗ ಅವುಗಳ ಹಿಂದೆ ತಾವು ಓಡುವರು. ಗೋಪಾಲರು, ಗೋಪಿ ಯರು ಈ ಆಟವನ್ನು ಮೈಮರೆತು ನೋಡುವರು. ಇಂತಹ ಅನೇಕ ರೀತಿ ಆಟಗಳನ್ನಾಡುತ್ತಾ ಆ ಮಕ್ಕಳು ವ್ರಜಭೂಮಿಗೆ ನಿತ್ಯೋತ್ಸವವನ್ನುಂಟು ಮಾಡಿದರು. ಮುಂದೆ ಇನ್ನೂ ಸ್ವಲ್ಪ ದೊಡ್ಡವರಾದಾಗ ಗೊಲ್ಲರ ಹುಡುಗರನ್ನು ಸೇರಿಸಿಕೊಂಡು ವಿವಿಧ ಆಟಗಳನ್ನಾಡಿದರು. ಮುಖ್ಯವಾಗಿ ಗೋವಳರ ಮನೆಗಳಿಗೆ ಕಳ್ಳತನದಿಂದ ಹೋಗಿ ಬೆಣ್ಣೆ ಮುದ್ದೆಗಳನ್ನು ಕದ್ದು ತಿನ್ನಲಾರಂಭಿಸಿದರು. ತಾವು ಹೊಟ್ಟೆ ತುಂಬಾ ತಿಂದು ಸುತ್ತುಮುತ್ತಲಿನ ಮರಗಳಲ್ಲಿದ್ದ ಕೋತಿಗಳಿಗೂ ಕೊಡುತ್ತಿದ್ದರು. ಇವರ ಉಪಟಳ ತಾಳಲಾರದೆ ಗೋಪಿಯರು ಯಶೋದೆಯ ಮುಂದೆ ದೂರುತ್ತಿದ್ದರು. ಮನಸ್ಸಿನೊಳಗೆ ಸಿಟ್ಟು ಬಂದರೂ ಅವರನ್ನು ಪ್ರತ್ಯಕ್ಷ ಕಂಡಾಗ ಯಶೋದೆಗೆ ನಗುಬಂದು ಬಿಡುತ್ತಿತ್ತು.



ಒಂದು ದಿನ ಕೃಷ್ಣನು ಮಣ್ಣು ತಿಂದನು. ಗೊಲ್ಲ ಹುಡುಗರು ಈ ವಿಷಯವನ್ನು ಯಶೋದೆಗೆ ತಿಳಿಸಿದರು. ಯಶೋದೆ ಗಾಬರಿ, ಆತಂಕದಿಂದ ಕೃಷ್ಣನನ್ನು ಗದರಿಸಿದಳು. ಆಗ ಕೃಷ್ಣನು ಮುಖವನ್ನು ಚಿಕ್ಕದು ಮಾಡಿಕೊಂಡು ''ಅಮ್ಮ, ಇವರೆಲ್ಲ ಸುಳ್ಳು ಹೇಳುತ್ತಿದ್ದಾರೆ. ನಾನು ಮಣ್ಣು ತಿಂದೇ ಇಲ್ಲ'' ಎಂದು ಹೇಳಿದನು. ಯಶೋದೆಯು ಬಾಯಿ ತೆರೆಯುವಂತೆ ಒತ್ತಾಯಿಸಿದಳು. ಅವನು ಬಾಯ್ತೆರೆದು ತೋರಿಸಿದನು. ಆ ತೆರೆದ ಬಾಯಲ್ಲಿ ಯಶೋದೆ ಕಂಡದ್ದೇನು? ಚರಾಚರ ವಿಶ್ವವೇ ಅವಳಿಗೆ ಅಲ್ಲಿ ಕಾಣಿಸಿತು. ಕ್ಷಣ ಕಾಲ ಭ್ರಮಾಧೀನಳಾದಂತೆ ಅವಳು ನಿಶ್ಚೇಷ್ಟಳಾದಳು. ಇದೇನು ಮಗುವೋ? ಇನ್ನೇನಾದರೂ ಭೂತವೋ? ಎಂಬ ಸಂದೇಹ ಬಂತು ಅವಳಿಗೆ. ಕೊನೆಗೆ ಇವನು ಸಾಕ್ಷಾತ್ ಪರಮಾತ್ಮನೇ ಎಂಬ ಅರಿವುಂಟಾಯಿತು. ಕೃಷ್ಣನ ಮೇಲಿನ ವಾತ್ಸಲ್ಯದ ಸ್ಥಾನ ದಲ್ಲಿ ಭಕ್ತಿ ನೆಲೆಗೊಂಡಿತು. ಅಷ್ಟರಲ್ಲಿ ಕೃಷ್ಣನು ತನ್ನ ತಾಯಿಯ ವಾತ್ಸಲ್ಯವನ್ನು ಕಳೆದುಕೊಳ್ಳಲು ಇಷ್ಟಪಡದೆ ಅವಳಲ್ಲಿ ಮತ್ತೆ ಮಾಯೆ ಆವರಿಸುವಂತೆ ಮಾಡಿದನು. ಯಶೋದೆಗೆ ತಾನು ನೋಡಿದ್ದೆಲ್ಲ ಮರೆತೇ ಹೋಯಿತು. ಉಕ್ಕಿಬಂದ ವಾತ್ಸಲ್ಯದಿಂದ ಕೃಷ್ಣನನ್ನು ಎತ್ತಿಕೊಂಡು ಮುದ್ದಾಡಿದಳು.

(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**

**ಚಿತ್ತೇ ಕೃಪಾ ಸಮರನಿಷ್ಠುರತಾ ಚ ದೃಷ್ಟಾ।**
**ತ್ವಯ್ಯೇವ ದೇವಿ ವರದೇ ಭುವನತ್ರಯೇಽಪಿ ॥**

ಅಂದರೆ ಹೇ ದೇವಿ, ವರದೆ, ಹೃದಯದಲ್ಲಿ ಕೃಪೆ ಮತ್ತು ಸಮರದಲ್ಲಿ ನಿಷ್ಠುರತೆ, ಇವುಗಳನ್ನು ಮೂರು ಲೋಕಗಳಲ್ಲಿ ಹುಡುಕಿದರೂ ನಿನ್ನಲ್ಲಿ ಮಾತ್ರವೇ ಕಾಣುವೆವು !

**ಪುಸ್ತಕ ಪರಿಚಯ :**

**ದೇವತಾ ಸ್ತೋತ್ರಗಳು**

ಶಂಕರ ಭಗವತ್ಪಾದಕರು ರಚಿಸಿರುವ ಹಲವಾರು ಸ್ತೋತ್ರಗಳಲ್ಲಿ ಕೆಲವನ್ನು ಆರಿಸಿ ಈ ಸಣ್ಣ ಹೊತ್ತಿಗೆಯಲ್ಲಿ ಸಂಗ್ರಹಿಸಿ ಪ್ರಕಟಿಸಲಾಗಿದೆ. ಈ ಪುಸ್ತಕದಲ್ಲಿ ಸಂಗ್ರಹಿಸಿದ ಸ್ತೋತ್ರಗಳು :

ಮಹಾಗಣೇಶ ಪಂಚಚಾಮರ ಸ್ತೋತ್ರಮ್, ಗಣೇಶ ಭುಜಂಗಮ್, ಸುಬ್ರಹ್ಮಣ್ಯ ಭುಜಂಗಮ್, ಶಿವಪಂಚಾಕ್ಷರ ಸ್ತೋತ್ರಮ್, ಶಿವಾಪರಾಧಕ್ಷಮಾಪಣ ಸ್ತೋತ್ರಮ್, ಉಮಾಮಹೇಶ್ವರ ಸ್ತೋತ್ರಮ್, ಶ್ರೀರಾಮ ಭುಜಂಗಮ್, ಶ್ರೀ ಹನುಮತ್ಪಂಚರತ್ನಂ, ಶ್ರೀ ಶಾರದಾ ಭುಜಂಗ ಪ್ರಯಾತಾಷ್ಟಕಂ, ಲಲಿತಾ ಪಂಚರತ್ನಮ್, ಅನ್ನಪೂರ್ಣಾಷ್ಟಕಂ, ಭ್ರಮರಾಂಭಾಷ್ಟಕಮ್, ಕನಕಧಾರಾಸ್ತವ, ಕೃಷ್ಣಾಷ್ಟಕಮ್, ಜಗನ್ನಾಥಾಷ್ಟಕಮ್, ಷಟ್ಪದೀ ಸ್ತೋತ್ರಮ್, ಶ್ರೀ ಜಗದ್ಗುರು ಶಂಕರ ಭಗವತ್ಪೂಜ್ಯಪಾದಾಚಾರ್ಯಸ್ತವ.

ಈ ಕೃತಿಯ ಪ್ರಕಾಶಕರು ವೇದಮೂರ್ತಿ ಎಚ್. ನಾರಾಯಣ ಭಟ್ ಸ್ಮಾರಕ ಟ್ರಸ್ಟ್ (ರಿ.), ಹಳೆಯಂಗಡಿ, ದ.ಕ. (ಪ್ರಕಟಣೆ 1999). ಇದರ ಟ್ರಸ್ಟಿಗಳು ಇಲ್ಲಿ ತಿಳಿಸಿರುವಂತೆ - ''ಈ ಟ್ರಸ್ಟನ್ನು ವೇದಮೂರ್ತಿ ಶ್ರೀ ಹ್ಯೊಗೆಗುಡ್ಡೆ ನಾರಾಯಣ ಭಟ್ ಇವರ ಹೆಸರಿನಲ್ಲಿ ಅವರ ಅಭಿಮಾನಿಗಳು, ಮಕ್ಕಳು, ಬಂಧು ಬಾಂಧವರು ನೀಡಿದ ಹಣದಿಂದ ತಾ.5-12-1991ರಲ್ಲಿ ಸ್ಥಾಪಿಸಿ ರಿಜಿಸ್ಟ್ರಿ ಮಾಡಲ್ಪಟ್ಟಿದೆ. ಶ್ರೀ ನಾರಾಯಣ ಭಟ್ರು ದಿನಾಂಕ 14-01-1991ರ ಮಕರ ಸಂಕ್ರಮಣದಂದು ದೈವಾಧೀನರಾದರು. ಇವರು ಪ್ರಸಿದ್ಧ ವೈದಿಕರಾಗಿದ್ದು ತಮ್ಮ ಕಾರ್ಯಚಟುವಟಿಕೆಗಳಿಂದ ಶ್ರೀ ಶೃಂಗೇರಿ ಜಗದ್ಗುರುಗಳ ಕೃಪೆಗೆ ಪಾತ್ರರಾಗಿದ್ದರು. ಇವರು ಹೆಜಮಾಡಿಯಲ್ಲಿ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಭಾವನ್ನು ಸ್ಥಾಪಿಸಿ, ಶಂಕರ ಜಯಂತಿ, ಸಾಮೂಹಿಕ ಧರ್ಮೋಪನಯನ, ಉಪಾಕರ್ಮ, ವೈದಿಕ ಹಾಗೂ ಸುರಸರಸ್ವತಿ ಸಭಾವು ನಡೆಸಿಕೊಂಡು ಬರುತ್ತಿರುವ ಸಂಸ್ಕೃತ ಪರೀಕ್ಷೆಗಳಿಗೆ ತರಬೇತಿ, ಹೀಗೆ ಹಲವಾರು ರಚನಾತ್ಮಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿದ್ದರು. ಈ ಕಾರ್ಯಕ್ರಮಗಳು ಅವರ ನಂತರವೂ ಮುಂದುವರಿದುಕೊಂಡು ಬರಲು ಅನುಕೂಲವೆಂದು ಈ ಟ್ರಸ್ಟನ್ನು ಸ್ಥಾಪಿಸಲಾಗಿದೆ. ಶ್ರೀ ಶಂಕರ ಜಯಂತಿ, ಸಾಮೂಹಿಕ ಉಪನಯನ, ವಿದ್ವಜ್ಜನ ಸನ್ಮಾನಗಳನ್ನು ಈ ಟ್ರಸ್ಟು ರಚನೆ ಆದಂದಿನಿಂದ ನಡೆಸಿಕೊಂಡು ಬರುತ್ತಿದೆ''.

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ

# ಮಾರ್ಪಳ್ಳಿ ಪ್ರಸಾದ್‌ರಿಗೆ ಅತ್ಯುತ್ತಮ ಉಪನ್ಯಾಸಕ ಸನ್ಮಾನ



ಬಾಪೂಜಿ ಇಂಜಿನಿಯರಿಂಗ್ ಕಾಲೇಜು (BIET) ದಾವಣಗೆರೆಯ ಎಂ.ಸಿ.ಎ. ವಿಭಾಗದಲ್ಲಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಮಾರ್ಪಳ್ಳಿ ಆರ್. ಮಂಜುನಾಥ್ ಅವರ ಮಗ ಮಾರ್ಪಳ್ಳಿ ಪ್ರಸಾದ್ ಇವರು 2008-09ರ ಸಾಲಿನಲ್ಲಿ ಎಂ.ಸಿ.ಎ. ವಿಭಾಗದಲ್ಲಿ ಮಾಡಿದ ಬೋಧನೆಯಲ್ಲಿ ಶೇಕಡ 100ಕ್ಕೆ 100ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದರಿಂದ ಇವರನ್ನು ಅತ್ಯುತ್ತಮ ಉಪನ್ಯಾಸಕರೆಂದು ದಿನಾಂಕ 19-06-2009ರಂದು ಸನ್ಮಾನ್ಯ ಶಾಸಕರು ಹಾಗೂ ಕಾಲೇಜಿನ ಗೌರವ ಕಾರ್ಯದರ್ಶಿಗಳೂ ಆದ ಶ್ರೀ ಶ್ಯಾಮನೂರು ಶಿವಶಂಕರಪ್ಪ ಇವರು ಸನ್ಮಾನಿಸಿದರು.

# ಶಿವಬ್ರಾಹ್ಮಣ ಸೇವಾ ಸಂಘ ಪುತ್ತೂರು ಇದರ ಹೊಸ ಆಡಳಿತ ಮಂಡಳಿಯ ಆಯ್ಕೆ

ತಾ.14-06-2009ರಂದು ಪುತ್ತೂರು ಶಿವಬ್ರಾಹ್ಮಣ ಸೇವಾ ಸಂಘದ ಹೊಸ ಆಡಳಿತ ಮಂಡಳಿಯು ಅಸ್ತಿತ್ವಕ್ಕೆ ಬಂದಿದ್ದು ಇದರ ಪದಾಧಿಕಾರಿಗಳ ಹೆಸರು ಈ ಕೆಳಗಿನಂತಿರುತ್ತದೆ:

ಎನ್. ಕೆ. ಜಗನ್ನಿವಾಸರಾವ್-ಅಧ್ಯಕ್ಷರು, ಟಿ. ಲಕ್ಷ್ಮೀನಾರಾಯಣರಾವ್-ಕಾರ್ಯದರ್ಶಿ, ನಿರ್ದೇಶಕರು-ಎಮ್.ಎಸ್. ರಘುನಾಥರಾವ್, ಎನ್.ಎಸ್.ನಟರಾಜ್, ಶ್ರೀನಿವಾಸರಾವ್, ಎಮ್.ಗಂಗಾಧರ ರಾವ್, ಎಚ್.ವಿ. ಬಾಲಚಂದ್ರರಾವ್, ರಾಮಕೃಷ್ಣ ಪೆರ್ವಾಜೆ ಮತ್ತು ಟಿ.ರಮಾನಂದರಾವ್.

ಪುತ್ತೂರು ಶಿವಬ್ರಾಹ್ಮಣ ಸಮಾಜದ ವತಿಯಿಂದ ಕಿಲ್ಲಾರೆ ಎಂಬಲ್ಲಿ ಕಲ್ಯಾಣ ಮಂಟಪ ಕಟ್ಟುವ ಯೋಜನೆಯಿದ್ದು ಮುರ ಎಂಬಲ್ಲಿ ವಿದ್ಯಾರ್ಥಿ ವಸತಿ ನಿಲಯದ ಪೂರ್ವಭಾವಿ ಕೆಲಸಗಳು ಈಗಾಗಲೇ ಪ್ರಾರಂಭವಾಗಿವೆ. ಸಂಘದ ಉತ್ಸಾಹಿ ಆಡಳಿತ ಮಂಡಳಿಯು ಎಲ್ಲಾ ಯೋಜನೆಗಳನ್ನು ವ್ಯವಸ್ಥಿತವಾಗಿ ಮತ್ತು ಎಲ್ಲ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹಂತ ಹಂತವಾಗಿ ಈ ಕಾರ್ಯ ನಡೆಸುತ್ತಿದೆ.

## ಪುಣ್ಯಸ್ಮರಣೆ



ಜನನ : 08-08-1938 ಮರಣ : 17-07-2008

**ಡಾ। ಎಲ್ಲೂರು ಚಂದ್ರಶೇಖರ ರಾವ್**

**ಸರಿದುದೊಂದು ವರುಷ ನಿಮ್ಮ ಬದುಕಿನಾ ನೆನಪಿನಲಿ**
**ಅರ್ಪಿಸುವೆವು ನುಡಿನಮನಗಳ ಶ್ರದ್ಧಾಭಕ್ತಿಯಲಿ**

ಶ್ರೀಮತಿ ಇಂದಿರಾ (ಪತ್ನಿ)
ಡಾ। ವೈ. ಸುದರ್ಶನ ರಾವ್ ಮತ್ತು ಶ್ರೀಮತಿ ವಿದ್ಯಾ ರಾವ್
ಶ್ರೀ ವೈ. ಚಿತ್ತರಂಜನ ರಾವ್ ಮತ್ತು ಶ್ರೀಮತಿ ಭಾನುಪ್ರಿಯ
ಶ್ರೀಮತಿ ನಿವೇದಿತಾ ರಾವ್ ಮತ್ತು ಶ್ರೀ ಕೆ. ಎಸ್. ಮುರಲೀಧರ ರಾವ್
ಮತ್ತು ಮೊಮ್ಮಕ್ಕಳು

## ವಚನಗಳು

ತನಗೆ ತಾನೇ ಬಂಧು
ತನಗೆ ತಾನೇ ಶತ್ರು
ತನ್ನ ನಡೆ ನುಡಿಯೊಳಗೆ
ಉನ್ನತಿಯು, ಅವನತಿಯು
ತನ್ನ ತಾ ನುದ್ಧರಿಸು
ಬಾಲಗೋಪಾಲ ॥ ೧ ॥

ಅನ್ಯರನು ಹಂಗಿಸಲು
ತನ್ನ ಗತಿ ಏರುವುದೆ?
ಅನ್ಯರಿಂ ಹುಡುಕಿ ತೆಗೆ
ಗುಣಗಳನು ಸೋಸಿನೀ
ಮನ್ನಣೆಯ ಪಡೆ ಜಗದಿ
ಬಾಲಗೋಪಾಲ ॥ ೨ ॥

ತನುವು ಶುಚಿ ಇರಲು
ಮನವು ಶಾಂತವದಿರಲು
ಧನವು ಮಿತವಾಗಿರಲು
'ನಾನು' ಎಂಬುದ ತೊರೆಯೆ
ಮನೆಯೊಳಗೆ ಕೈಲಾಸ ॥
ಬಾಲಗೋಪಾಲ ॥ ೩ ॥

ದುಡಿವವಗೆ ಸತ್ಕಾರ್ಯ
ಗಡಿಗಡಿಗೆ ಬರಬಹುದು
ಎಡರುಗಳು ತೊಡರುಗಳು
ಬಿಡದೆ ಮುನ್ನಡೆವವನೆ
ಗಂಡು ಗಲಿ ಎನಿಸುವನು
ಬಾಲಗೋಪಾಲ ॥ ೪ ॥

ನಾಲಗೆಯು ಹಾಲೆನಲು
ಹಾಲು ಬಂದಿಳಿಯುವುದೆ?
ಗಾಳಿ ಗೋಪುರ ತ್ಯಜಿಸಿ
ಇಳಿಯುವವ ಕಾರ್ಯದೊಳು
ಏಳಿಗೆಯ ಪಡೆಯುವನು
ಬಾಲಗೋಪಾಲ ॥ ೫ ॥

ಎಣಿಸದಿರು ಜಾತಿಮತ
ಜ್ಞಾನಿಯ ಬದುಕಿನಲಿ
ಗುಣ ಹೊರತು ಖಿಡುಗದಲಿ
ಒರೆಯ ನೋಡುವರೇನು?
ಜ್ಞಾನದಾ ಬೆಲೆ ಅರಿವು
ಬಾಲಗೋಪಾಲ ॥ ೬ ॥

ಸುತ್ತಿ ಸುಳಿಯಲು ಬೇಕು
ಹತ್ತುವರೆ ಗಿರಿಯನ್ನು
ಸತತ ದುಡಿಯಲು ಬೇಕು
ಕೀರ್ತಿಯನು ಗಳಿಸುವರೆ
'ಮತ್ತು' ತೊರೆಯಲೆ ಬೇಕು
ಬಾಲಗೋಪಾಲ ॥ ೭ ॥

ಗಿರಿಯು ಕಠಿಣವದಿರಲು
ನೀರು ಹರಿಯಲು ಸತತ
ಕೊರೆಯದೇ ಕಠಿಣತೆಯ
ಕ್ರೂರಿಗಳ ನೋಲಿಸುವರೆ
ಮೃದು ಮಧುರ ನುಡಿಲೇಸು
ಬಾಲಗೋಪಾಲ ॥ ೮ ॥

ಕುಂಭಾಟ್ ಗೋಪಾಲರಾವ್. ಕಡಬ

## ನಿಯತ್ತು

ಕನ್ನಡ
ಭಾಷೆಯ ಮೇಲಿನ
ತಾಕತ್ತು
ಕಳೆದುಕೊಂಡರೆ
ನಮಗೆ ಆಪತ್ತು.
ಬೆಳಿಸಿಕೊಳ್ಳಬೇಕು
ಭಾಷೆಯ ಮೇಲೆ
ನಿಯತ್ತು.

## ಯುಗಾದಿ

ನವವರುಷ
ನವಹರುಷ
ತರಲಿ ಯುಗಾದಿ
ಕಳೆದು ಬಿಡಲಿ
ಹಿಂದಿನ ಕಹಿ ಬೇಗುದಿ
ಅರಳಲಿ ಎಲ್ಲೆಡೆ
ಸುಖ ಶಾಂತಿ ನೆಮ್ಮದಿ
ಬೇವು-ಬೆಲ್ಲದಂತೆ
ಬಾಳು ಜಗದಿ

## ಸುಡುಗಾಡು

ಗಿಡಮರ
ಕಡಿದು
ನಾಶವಾಗಿದೆ ಕಾಡು.
ಇನ್ನೆಲ್ಲಿ
ಬರಬೇಕು
ತಂಪುಗಾಳಿ, ಮಳೆ
ಎಲ್ಲ ಸುಡುಗಾಡು.

## ನಮಿಸು

ಸಾಹಿತ್ಯ
ಎನ್ನುವುದು
ಒಂದು ತಪಸ್ಸು
ಹಗಲು-ರಾತ್ರಿ
ಓದು-ಬರಿ.
ಅದುವೇ
ಸಾಹಿತ್ಯದೇವಿಗೆ
ಹವಿಸ್ಸು

## ಯಜ(ಅನು)ಮಾನ

ದೊಡ್ಡಸ್ತಿಕೆ
ತೋರುವುದೇ
ಅವನ ಜಾಯಮಾನ
ಅದಕ್ಕಾಗಿ
ಆಗಿದ್ದಾನೆ
ಸ್ವಘೋಷಿತ
ಯಜ(ಅನು)ಮಾನ

- ಮಾರ್ಪಳ್ಳಿ ಆರ್. ಮಂಜುನಾಥ್, ಶಿವಮೊಗ್ಗ

**PRAMOD**
AUTOMOBILES
KARANGALPADY, MANGALORE - 575 003.
Ph : 2491723 (O)
2493633 (H.O.)
2212723 (R)
: Wholesale & Retail Dealers in :
2 & 3 WHEELERS SPARES & ACCESSORIES
Prop. :Ln.K. HARSHA KUMAR

# ಶ್ರೀಶಾರದಾ ವೇದಿಕೆಯ ಮಹಾಪೋಷಕರಾಗಿ ಶ್ರೀಮತಿ ವಿಜಯಾ ಆರ್.ರಾವ್

1957ರಲ್ಲಿ ಅಂಬಲಪಾಡಿಯಲ್ಲಿ ಜನಿಸಿ, ಮುಂಬಯಿಯಲ್ಲಿ ಬೆಳೆದು ಪ್ರಸಕ್ತ ಮುಂಬಯಿಯಲ್ಲಿ ಪ್ರತಿಷ್ಠಿತ ಕಾನೂನು ಸಲಹಾ ಸಂಸ್ಥೆಯಲ್ಲಿ ಕಾನೂನು ತಜ್ಞೆಯೂ ಆಗಿರುವ ಶ್ರೀಮತಿ ವಿಜಯಾ ಆರ್.ರಾವ್ ಶ್ರೀಶಾರದಾ ಪತ್ರಿಕೆಯ ಮಹಾಪೋಷಕರಾಗಿ ಪತ್ರಿಕೆಯ ಬೆಳವಣಿಗೆಗೆ ಒತ್ತು ನೀಡಿದ್ದಾರೆ. ಅವರು ಕಾಣಿಯೂರು ಸುಬ್ಬ ರಾಮಕೃಷ್ಣ ರಾವ್ ಹಾಗೂ ಮನೋರಮಾ ರಾವ್ ದಂಪತಿಗಳ ಮಗಳು. ಮನೋರಮಾ ರವರು ಅಂಬಲಪಾಡಿ ಶ್ರೀನಿವಾಸರಾವ್-ಸತ್ಯಮ್ಮನವರ ಮಗಳು. (ಉಡುಪಿ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಗೌರವಾಧ್ಯಕ್ಷ ಶ್ರೀ ಅಂಬಲಪಾಡಿ ಕೃಷ್ಣರಾಯರ ಸಹೋದರಿ).

ಮುಂಬಯಿಯಲ್ಲಿ ತನ್ನ ಶಾಲಾ ದಿನಗಳನ್ನು ಕಳೆದು, ಕಲಾವಿಭಾಗ (ಆರ್ಟ್ಸ್)ದಲ್ಲಿ ಪದವಿ, B.A.(HONS) ಸ್ನಾತಕೋತ್ತರ ವಿದ್ಯಾಭ್ಯಾಸ, ಅಲ್ಲದೆ ಕಾನೂನು ಪದವಿಗಳನ್ನು ಮುಂಬೈ ವಿಶ್ವವಿದ್ಯಾನಿಲಯದಿಂದ ಪಡೆದ ವಿಜಯಾ ರವರು 1977ರಲ್ಲಿ ಐ.ಸಿ.ಐ.ಸಿ.ಐ. ಲಿಮಿಟೆಡ್ ಸಂಸ್ಥೆಯಲ್ಲಿ ಶೀಘ್ರಲಿಪಿಕಾರರಾಗಿ ತನ್ನ ವೃತ್ತಿ ಜೀವನವನ್ನು ಆರಂಭಿಸಿದರು. ಕಾನೂನು ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ನಂತರ ಸಂಸ್ಥೆಯ ಕಾನೂನು ಸಹಾಯಕಿಯಾಗಿ ಪದೋನ್ನತಿಹೊಂದಿದರು. 1982ರಲ್ಲಿ ಅಂಬಲಪಾಡಿ ನಾರಾಯಣರಾಯರ ಮಗ-ಸಿಂಡಿಕೇಟ್ ಬ್ಯಾಂಕಿನಲ್ಲಿ ಅಧಿಕಾರಿಯಾಗಿದ್ದ ಎ. ರಘುಪತಿರಾಯರನ್ನು ವಿವಾಹವಾದರು. ಐ.ಸಿ.ಐ.ಸಿ.ಐ. ಲಿಮಿಟೆಡ್ ಮುಂದೆ ಐ.ಸಿ.ಐ.ಸಿ.ಐ. ಬ್ಯಾಂಕ್ ಆಗಿ ಖಾಸಗೀ ರಂಗದ ದೊಡ್ಡ ಬ್ಯಾಂಕ್ ಆಗಿ ಬೆಳೆಯಿತು. ಆ ಸಂಸ್ಥೆಯಲ್ಲಿ 2007ರ ವರೆಗಿನ 30 ವರ್ಷಗಳ ಸೇವಾವಧಿಯಲ್ಲಿ ಪರಿಣತ ಕಾನೂನು ತಜ್ಞೆಯಾಗಿ ದುಡಿಯುತ್ತಾ ಬ್ಯಾಂಕಿಂಗ್ ಮತ್ತು ಆರ್ಥಿಕತೆಯಲ್ಲಿ ಹೆಚ್ಚಿನ ಪರಿಜ್ಞಾನ ಹೊಂದಿದರು. ಬೃಹತ್ ಉದ್ಯಮಗಳ ಆರ್ಥೋರಚನೆ (Infrastructure) ಗೆ ಸಂಬಂಧಿಸಿದ ಆರ್ಥಿಕತೆಯಲ್ಲೂ ಅನುಭವ ಪಡೆದರು.



ಐ.ಸಿ.ಐ.ಸಿ.ಐ. ಬ್ಯಾಂಕ್‌ನಲ್ಲಿ ಕಳೆದ ಕೊನೆಯ ಕೆಲವು ವರ್ಷಗಳು ಅವರ ಸಾಧನೆಯ ಮಹತ್ತರ ಮೆಟ್ಟಿಲುಗಳಾದವು. ಪದೋನ್ನತಿಗಳು, ಪ್ರಶಂಸೆಗಳನ್ನು ಬ್ಯಾಂಕ್ ನೀಡಿತು. ಇದು ಬ್ಯಾಂಕ್ ಅವರ ಮೇಲೆ ಇಟ್ಟ ವಿಶ್ವಾಸದ ಪ್ರತೀಕವಾಗಿತ್ತು. ಹರ್ಬರ್ಟ್ ಸ್ಮಿತ್, ಲಂಡನ್; ಕ್ಯಾಂಬ್ರಿಜ್ ವಿಶ್ವವಿದ್ಯಾಲಯ; ಬ್ರಿಟನ್ ಮತ್ತು ಯೂರೋಮನಿ ಹಾಗೂ ಸಿಂಗಾಪುರಗಳಿಗೆ ಕಾನೂನು ವಿಷಯದ ತರಬೇತಿಗಳಲ್ಲಿ ಭಾಗವಹಿಸಲು ಬ್ಯಾಂಕ್ ಅವರನ್ನು ನಿಯೋಜಿಸಿತು.

ಬ್ಯಾಂಕಿನ ತರಬೇತಿ ವಿದ್ಯಾಲಯದಲ್ಲಿ, ಬ್ಯಾಂಕರ್ಸ್ ತರಬೇತಿ ಮಹಾವಿದ್ಯಾಲಯದಲ್ಲಿ ಕಾನೂನು ಕಾಲೇಜುಗಳಲ್ಲಿ ಉದ್ಯೋಗಿಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸಗಳನ್ನು ಕೊಡುವುದು, ತರಬೇತಿ-ತರಗತಿಗಳನ್ನು ನಡೆಸುವುದು ಅವರ ವೃತ್ತಿಯ ಒಂದು ಭಾಗವಾಯಿತು. ಬ್ಯಾಂಕಿನ ನೀತಿ ಸಂಹಿತೆಗಳನ್ನು ರೂಪಿಸುವ ವಿವಿಧ ಸಮಿತಿಗಳಲ್ಲಿ ಅವರು ಪ್ರತಿನಿಧಿಸಿದ್ದರು. ಇಂಡಿಯನ್ ಬ್ಯಾಂಕ್ಸ್ ಅಸೋಸಿಯೇಶನ್‌ನ Working Groupನ ಪ್ರಮುಖ ಸದಸ್ಯೆಯೂ ಆಗಿದ್ದಾರೆ.

ವಿಜಯಾ ರಾವ್ ಪ್ರಸಕ್ತ ಐ.ಸಿ.ಐ.ಸಿ.ಐ. ಬ್ಯಾಂಕ್‌ನಿಂದ ನಿರ್ಗಮಿಸಿ ದೇಶದ ಪ್ರಮುಖ ಮೂರು ಕಾನೂನು ಸಂಸ್ಥೆಗಳಲ್ಲೊಂದಾದ ಮುಂಬಯಿಯ Luthra & Luthra Law Officesನಲ್ಲಿ ಪಾಲುದಾರರಾಗಿ, ಕಾನೂನು ತಜ್ಞೆಯಾಗಿ ಕೆಲಸ ಮಾಡುತ್ತಿದ್ದಾರೆ.

**ಅತಿ ಪ್ರಶಂಸೆಯ ಕಾನೂನು ತಜ್ಞೆ ಪ್ರಶಸ್ತಿ :** ಏಷಿಯಾ ಲಾ ಲೀಡಿಂಗ್ ಲಾಯರ್ಸ್ ಸರ್ವೆ (Asia Law Leading Survey) ವರ್ಷ 2008ರಲ್ಲಿ ''ಪರಿಯೋಜನಾ ಆರ್ಥಿಕತೆ'' (Project Finance) ವಿಭಾಗದಲ್ಲಿ ಅವರನ್ನು ''ಅತಿ ಹೆಗ್ಗಳಿಕೆಯ ಕಾನೂನು ತಜ್ಞೆ'' ಪ್ರಶಸ್ತಿ ನೀಡಿ ಗೌರವಿಸಿದೆ. The Asia Leading Lawyers Surveyಯನ್ನು 1995ರಿಂದ ದಿ ಏಷಿಯಾ ಲಾ ಅಂಡ್ ಪ್ರಾಕ್ಟೀಸ್ ಸಂಸ್ಥೆ (ಯುರೋಮನಿ ಸಾಂಸ್ಥಿಕ ವಿನಿಯೋಗ ವಿಭಾಗದ ವಿಶೇಷ ರಚನೆ) ನಡೆಸುತ್ತಿದ್ದು ವರ್ಷ 2008ರಲ್ಲಿ 16,000ಕ್ಕೂ ಮೇಲ್ಪಟ್ಟು ಕಾನೂನು ಸಂಸ್ಥೆಗಳು ಹಾಗೂ ಕಾನೂನು ತಜ್ಞರಿಂದ ನಾಮಾಂಕನ ಶಿಫಾರಸುಗಳನ್ನು ಆಹ್ವಾನಿಸಿತ್ತು. ಈ ಮೂಲಕ ಕಾನೂನು ಕ್ಷೇತ್ರದ ಯಾವುದೇ ವಿಭಾಗದಲ್ಲಿ ನಿರಂತರವಾಗಿ ವಿಶೇಷ ಸಾಧನೆ ಮಾಡಿದವರನ್ನು ಗುರುತಿಸುವುದು ಸಂಸ್ಥೆಯ ಧ್ಯೇಯ.

ವರ್ಷ 2009ರಲ್ಲೂ ಅಂದರೆ ನಿರಂತರ ಎರಡನೇ ಬಾರಿ ಈ ಪ್ರಶಸ್ತಿ ವಿಜಯಾ ರಾವ್ ಅವರಿಗೆ ಸಂದಿರುವುದು ವಿಶೇಷ. ಇದು 'ಪರಿಯೋಜನಾ ಆರ್ಥಿಕತೆ'ಯಲ್ಲಿ ಅವರು ಹೊಂದಿರುವ ಪರಿಣತಿ ಮತ್ತು ನೈಪುಣ್ಯಕ್ಕೆ ಸಾಕ್ಷಿಯಾಗಿದೆ. ಇವರ ಸಾಧನೆಯನ್ನು ಗಮನಿಸಿ ಮುಂಬಯಿಯ ಸುಬ್ರಹ್ಮಣ್ಯ ಸೇವಾ ಸಂಘ 2008ನೇ ಸಾಲಿನ ವಾರ್ಷಿಕ ಮಹಾಸಭೆಯ ಸಂದರ್ಭದಲ್ಲಿ ಇವರನ್ನು ಸನ್ಮಾನಿಸಿ ಗೌರವಿಸಿದೆ.

ವಿಜಯಾರಾವ್ ಈಗ ಮುಂಬಯಿಯಲ್ಲಿ ವಾಸಿಸುತ್ತಿದ್ದಾರೆ. ಪತಿ ಸ್ವಯಂ ನಿವೃತ್ತ ಬ್ಯಾಂಕ್ ಅಧಿಕಾರಿ. ಮಗ ಕಾರ್ತಿಕ್ ರಾವ್ ಎಂ.ಬಿ.ಎ. ಪದವೀಧರ. ಕಂಪನಿಯೊಂದರಲ್ಲಿ ಉದ್ಯೋಗಿ. ಮಗಳು ಅರ್ಚನಾ ವಾಣಿಜ್ಯ ವಿದ್ಯಾರ್ಥಿನಿ. ಎಂ.ಬಿ.ಎ. ಆಕಾಂಕ್ಷಿ. ವಿಜಯಾ ರಾವ್ ಅವರಿಗೆ ಶ್ರೀಶಾರದಾ ಹಾರ್ದಿಕ ಕೃತಜ್ಞತೆಗಳನ್ನು ಸಲ್ಲಿಸಿ ವೃತ್ತಿ ಜೀವನದಲ್ಲಿ ಹೆಚ್ಚಿನ ಉನ್ನತಿಯನ್ನು ಹಾರೈಸುತ್ತದೆ.

# ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾ (ರಿ.), ಮೈಸೂರು

ಶ್ರೀ ಶಂಕರ ಜಯಂತಿ ಹಾಗೂ 28ನೇ ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ 01-05-2009ರಂದು ಮೈಸೂರಿನ ಕುವೆಂಪು ನಗರದಲ್ಲಿರುವ 'ಯಜಮಾನ' ಸಭಾಂಗಣದಲ್ಲಿ ನಡೆಸಲಾಯಿತು. ಪ್ರಾತಃಕಾಲ ಎಂಟು ಗಂಟೆಗೆ ಸರಿಯಾಗಿ ನಮ್ಮ ಸಮಾಜದ ಹಿರಿಯ ಪುರೋಹಿತರಾದ ಶ್ರೀ ಅನಂತರಾಮ ಶರ್ಮರ ಪೌರೋಹಿತ್ಯದಲ್ಲಿ ಶ್ರೀ ರುದ್ರಾಭಿಷೇಕ, ರುದ್ರ ಪಾರಾಯಣ ಹಾಗೂ ಕಲ್ಪೋಕ್ತ ಪೂಜೆಗಳನ್ನು ನಡೆಸಲಾಯಿತು. ಸಭಾದ ಅಧ್ಯಕ್ಷರಾದ ಶ್ರೀ ಉಮೇಶರಾವ್ ಎರ್ಮಾಳು ಹಾಗೂ ಇವರ ಸಹಧರ್ಮಿಣಿ ಶ್ರೀಮತಿ ಪುಷ್ಪ ಯು. ರಾವ್‌ರವರು ಪೂಜಾಕರ್ತೃಗಳಾಗಿ ಪೂಜೆಯನ್ನು ನಡೆಸಿಕೊಟ್ಟರು. ರುದ್ರ ಪಾರಾಯಣದಲ್ಲಿ ಶ್ರೀ ಗಣೇಶ ಶಾಸ್ತ್ರಿ ಶ್ರೀ ಶಿವಶಂಕರ್ ಪಿ., ಶ್ರೀ ಜಗದೀಶ ರಾವ್ ಎಂ.ಆರ್. ಮತ್ತು ಡಾ|| ಸುಬ್ರಹ್ಮಣ್ಯ ಶಾಸ್ತ್ರಿ ಕೆ.ಯವರು ಭಾಗವಹಿಸಿ ಶ್ರೀ ಅನಂತರಾಮ ಶರ್ಮರವರಿಗೆ ಸಹಕರಿಸಿದರು. 9 ಗಂಟೆಗೆ ಸರಿಯಾಗಿ ನೆರೆದ ಸಮಾಜ ಬಾಂಧವರಿಗೆ ಉಪಾಹಾರದ ವ್ಯವಸ್ಥೆಯನ್ನು ಏರ್ಪಡಿಸಲಾಗಿತ್ತು.

ಸುಮಾರು 10-30 ಗಂಟೆಗೆ ಸರಿಯಾಗಿ ಸಭಾದ 28ನೇ ವಾರ್ಷಿಕ ಮಹಾಸಭೆಯನ್ನು ಸಭಾದ ಅಧ್ಯಕ್ಷರಾದ ಉಮೇಶರಾವ್ ಎರ್ಮಾಳುರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಮೊತ್ತ ಮೊದಲಾಗಿ ನಮ್ಮ ಸಂಘದ ಖಾಯಂ ಆಹ್ವಾನಿತರಾದ ಶ್ರೀ ಇನ್ನಾ ಶ್ರೀನಿವಾಸರಾವ್ ಮತ್ತು ನಮ್ಮ ಸಭಾದ ಸದಸ್ಯರಾದ ಶ್ರೀ ಉದಯಕುಮಾರ್, ಇನ್ನ ದಾಮೋದರ ರಾವ್ ಮತ್ತು ಲಕ್ಷ್ಮೀಕಾಂತ ಹೆಬ್ಬಾರ್ ಇವರ ಅಕಾಲ ನಿಧನಕ್ಕಾಗಿ ಒಂದು ನಿಮಿಷದ ಮೌನ ಪ್ರಾರ್ಥನೆಯನ್ನು ನಡೆಸಲಾಯಿತು. ಪ್ರಾರ್ಥನೆಯೊಂದಿಗೆ ವಾರ್ಷಿಕ ಮಹಾಸಭೆಯನ್ನು ಪ್ರಾರಂಭಿಸಲಾಯಿತು. ಅಧ್ಯಕ್ಷರು ನೆರೆದಿದ್ದ ಎಲ್ಲಾ ಸಭಾ ಸದಸ್ಯರನ್ನು ಸ್ವಾಗತಿಸಿದರು. 2008-09ನೇ ವರ್ಷದ ಆಡಳಿತ ವರದಿಯನ್ನು ಕಾರ್ಯದರ್ಶಿಯವರಾದ ಶ್ರೀ ಗಣೇಶ ಅಧಿಕಾರಿಯವರು ಮಂಡಿಸಿದರು. ಸರ್ವಾನುಮತದಿಂದ ಅದನ್ನು ಅಂಗೀಕರಿಸಲಾಯ್ತು. ಮಹಿಳಾ ವಿಭಾಗದ ವರದಿಯನ್ನು ಶ್ರೀಮತಿ ಅಮೃತ ಕಲಾರವರು ಮಂಡಿಸಿದರು ಮತ್ತು ಯುವ ವಿಭಾಗದ ವರದಿಯನ್ನು ಶ್ರೀ ಆನಂದ ಕುಮಾರ್‌ರವರು ಮಂಡಿಸಿದರು. 2008-09ನೇ ಸಾಲಿನ ಪರಿಶೋಧಿಸಿದ ಲೆಕ್ಕಪತ್ರವನ್ನು ಶ್ರೀ ಶಿವಶಂಕರ್ ಓದಿದರು ಮತ್ತು ಸರ್ವಾನುಮತದಿಂದ ಲೆಕ್ಕಪತ್ರವನ್ನು ಅಂಗೀಕರಿಸಲಾಯಿತು. ಮುಂದಿನ ವರ್ಷಕ್ಕೆ ಅಂದರೆ 2009-10ನೇ ಸಾಲಿಗೆ ಲೆಕ್ಕಪರಿಶೋಧಕರಾಗಿ ಶ್ರೀ ಎಂ. ಆರ್. ಜಗದೀಶರಾವ್, ಚಾರ್ಟರ್ಡ್ ಅಕೌಂಟೆಂಟ್ ಅವರನ್ನು ಸರ್ವಾನುಮತದಿಂದ ಆರಿಸಲಾಯಿತು.

ನಂತರ 2009ರಿಂದ 2012ರ ಸಾಲಿಗೆ 3 ವರ್ಷಗಳ ಅವಧಿಗೆ ನೂತನ ಕಾರ್ಯಕಾರಿ ಮಂಡಳಿಯನ್ನು ಚುನಾಯಿಸಲಾಯಿತು. ಚುನಾವಣಾ ಅಧಿಕಾರಿಯಾಗಿ ಶ್ರೀ ವೈ. ಉಮೇಶರಾಯರನ್ನು ನೇಮಿಸಲಾಯಿತು. ಯಾವುದೇ ನಾಮಪತ್ರಗಳು ಬಾರದ ಕಾರಣ ಕಾರ್ಯಕಾರಿ ಮಂಡಳಿಗೆ ಈ ಕೆಳಗಿನ ಮಹನೀಯರನ್ನು ಸರ್ವಾನುಮತದಿಂದ ನೇಮಿಸಲಾಯಿತು.

ಶ್ರೀ ಕೆ. ಆನಂದ ರಾವ್ (ಅಧ್ಯಕ್ಷರು), ಶ್ರೀ ಶ್ರೀಕೃಷ್ಣರಾವ್, ಶ್ರೀಮತಿ ವೀಣಾ ಗಿರಿಧರ ರಾವ್ (ಉಪಾಧ್ಯಕ್ಷರು), ಶ್ರೀ ಕೋಲ್ಪೆ ಕುಮಾರಸ್ವಾಮಿ (ಕಾರ್ಯದರ್ಶಿ), ಶ್ರೀ ಗಣೇಶ ಅಧಿಕಾರಿ, ಶ್ರೀ ಆನಂದಕುಮಾರ್ (ಜೊತೆ ಕಾರ್ಯದರ್ಶಿ), ಶ್ರೀ ಉಮೇಶ್ ಶ್ರೀರಂಗಪಟ್ಟಣ (ಖಜಾಂಚಿ) ಹಾಗೂ ಸದಸ್ಯರುಗಳಾಗಿ ಶ್ರೀ ವೈ. ಉಮೇಶರಾವ್, ಶ್ರೀ ಉಮೇಶ್‌ರಾವ್ ಎರ್ಮಾಳು, ಶ್ರೀ ಟಿ.ಸಿ. ರಾವ್, ಶ್ರೀ ಕೆ. ರಾಮಮೂರ್ತಿರಾವ್, ಶ್ರೀ ಅನಂತರಾಮ ಶರ್ಮ, ಶ್ರೀ ಕೆ. ಪದ್ಮನಾಭ ರಾವ್, ಶ್ರೀ ಟಿ. ಮೋಹನರಾವ್, ಶ್ರೀ ಪಿ. ಶಿವಶಂಕರ ರಾವ್, ಡಾ|| ಎಸ್.ಕೆ. ಅಶ್ವಥ್, ಶ್ರೀಮತಿ ಮಮತ ಅಧಿಕಾರಿ, ಶ್ರೀಮತಿ ರಮಾವಾಣಿ ರಾವ್, ಶ್ರೀಮತಿ ಅಮೃತಕಲಾ ಅಶೋಕ್, ಶ್ರೀ ಚಂದ್ರಶೇಖರ ಪಾಂಡವಪುರ, ಶ್ರೀ ಪಾಂಡುರಂಗ ಶ್ಯಾನುಭಾಗ್ ಕೊಳ್ಳೇಗಾಲ.

ಯುವ ವಿಭಾಗ : ಶ್ರೀ ರಾಜೇಶ್ (ಅಧ್ಯಕ್ಷರು), ಅಶ್ವಿನಿಕುಮಾರ್ ಶ್ರೀರಂಗಪಟ್ಟಣ (ಕಾರ್ಯದರ್ಶಿ).

ಮಹಿಳಾ ವಿಭಾಗ : ಶ್ರೀಮತಿ ರಮಾವಾಣಿ ಟಿ.ಸಿ.ರಾವ್ (ಅಧ್ಯಕ್ಷರು), ಶ್ರೀಮತಿ ಲತಾ ರಾಮಮೂರ್ತಿ ರಾವ್ (ಕಾರ್ಯದರ್ಶಿ).

ಪತ್ರಿಕಾವಿಭಾಗ : ಶ್ರೀಮತಿ ಉದಯಲಕ್ಷ್ಮಿ ಶರ್ಮ.

ಸಾಂಸ್ಕೃತಿಕ ಕಾರ್ಯಕ್ರಮದ ಸಂಚಾಲಕರು -ಶ್ರೀ ಪಿ. ಶಿವಶಂಕರರಾವ್.

ಕಟ್ಟಡ ಸಮಿತಿಯ ಕಾರ್ಯಕಾರಿ ಮಂಡಳಿಯನ್ನು ಹಾಗೆಯೇ ಮುಂದುವರೆಸಿಕೊಂಡು ಹೋಗಬೇಕಾಗಿಯೂ ನಿರ್ಣಯಿಸಲಾಯಿತು.

ಅಧ್ಯಕ್ಷರು ಭಾಷಣದಲ್ಲಿ ತಮ್ಮ ಮೂರು ವರ್ಷದ ಅವಧಿಯಲ್ಲಿ ಈ ಸಭಾವನ್ನು ಅಚ್ಚುಕಟ್ಟಾಗಿ ಮುಂದುವರಿಸಲು ಸಹಕರಿಸಿದ ಎಲ್ಲಾ ಪದಾಧಿಕಾರಿಗಳಿಗೂ ಹಾಗೂ ಸನ್ಮಾನ್ಯ ಸದಸ್ಯರೆಲ್ಲರಿಗೂ ಕೃತಜ್ಞತೆಯನ್ನು ಸಲ್ಲಿಸಿದರು. ಅಲ್ಲದೆ ಸಂಘಕ್ಕೆ ಅಧಿಕಾರಿ ಕುಟುಂಬದವರು ಕೊಟ್ಟ ಎರಡು ಸೈಟುಗಳಲ್ಲಿ ಒಂದು ಸೈಟ್ ರಿಜಿಸ್ಟರ್ ಆಗಿದ್ದು ಇನ್ನೊಂದು ಮೂಲೆ ಸೈಟನ್ನು ಆದಷ್ಟು ಬೇಗ ರಿಜಿಸ್ಟರ್ ಆಗಲಿದೆ ಎಂದು ತಿಳಿಸಿ ಈ ನಿವೇಶನದಲ್ಲಿ ಸಂಘದ ಕಟ್ಟಡವನ್ನು ಕಟ್ಟಲು ಎಲ್ಲರೂ ತನುಮನಧನಗಳಿಂದ ಸಹಕರಿಸಬೇಕಾಗಿ ವಿನಂತಿಸಿಕೊಂಡರು. ಧನ್ಯವಾದದೊಂದಿಗೆ ಸಭಾದ 28ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ಸಂಪನ್ನಗೊಳಿಸಲಾಯ್ತು.

ಸುಮಾರು ಹನ್ನೆರಡು ಗಂಟೆಗೆ ಸರಿಯಾಗಿ ಶ್ರೀ ಶಂಕರ ಜಯಂತಿಯನ್ನು ಪ್ರಾರಂಭಿಸಲಾಯಿತು. ಅಧ್ಯಕ್ಷತೆಯನ್ನು ಸಭಾದ ಅಧ್ಯಕ್ಷರಾದ ಶ್ರೀ ಉಮೇಶ್‌ರಾವ್ ಎರ್ಮಾಳುರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಬಪ್ಪನಾಡು ಸೋಮಶೇಖರ ರಾಯರು ಆಗಮಿಸಿದ್ದರು. ಸಭೆಯಲ್ಲಿ ಡಾ|| ಕೆ. ಸುಬ್ರಹ್ಮಣ್ಯ ಶಾಸ್ತ್ರಿ ಹಾಗೂ ಶ್ರೀಮತಿ ಸುಲೋಚನ ರಾವ್‌ರವರನ್ನು ಸನ್ಮಾನಿಸಲಾಯಿತು. ಡಾ|| ಕೆ. ಸುಬ್ರಹ್ಮಣ್ಯ ಶಾಸ್ತ್ರಿಯವರನ್ನು ಶ್ರೀ ಕೆ. ರಾಮಮೂರ್ತಿಯವರು ಸಭೆಗೆ ಪರಿಚಯಿಸಿದರು ಹಾಗೂ ಶ್ರೀಮತಿ ಸುಲೋಚನ ರಾವ್‌ರವರನ್ನು ಶ್ರೀ ಉಮೇಶ ರಾವ್ ಎರ್ಮಾಳುರವರು ಸಭೆಗೆ ಪರಿಚಯಿಸಿದರು. ಸನ್ಮಾನಿತರಿಗೆ ಗಂಧದ ಹಾರ, ಶಾಲು ಹೊದಿಸಿ, ಹೂ-ಹಣ್ಣು ಕೊಟ್ಟು ಮುಖ್ಯ ಅತಿಥಿಗಳು ಸನ್ಮಾನಿಸಿದರು. ಸನ್ಮಾನಿತರ ಪರವಾಗಿ ಶ್ರೀಮತಿ ಸುಲೋಚನ ರಾವ್ ಮಾತನಾಡಿದರು. ಮುಖ್ಯ ಅತಿಥಿಗಳು ಶ್ರೀ ಶಂಕರ ಭಗವತ್ಪಾದರ ಬಗ್ಗೆ ಪ್ರವಚನ ವಿತ್ತರು. ಅಧ್ಯಕ್ಷರು ಎಲ್ಲರಿಗೂ ವಂದಿಸಿದರು. ಈ ಸಲದ ಶಂಕರ ಜಯಂತಿ ಕಾರ್ಯಕ್ರಮದ ಸಂಪೂರ್ಣ ಪ್ರಾಯೋಜಕರಾಗಿ ತಮ್ಮ 25ನೇ ವರ್ಷದ ವೈವಾಹಿಕ ಜೀವನದ ಸವಿ ನೆನಪಿಗಾಗಿ ಡಾ|| ಕೆ. ಗಿರಿಧರ ರಾವ್ ಮತ್ತು ಶ್ರೀಮತಿ ವೀಣಾ ಗಿರಿಧರ ರಾವ್ ವಹಿಸಿಕೊಂಡರು. ಅವರಿಗೆ ಸಭಾವು ಋಣಿಯಾಗಿದೆ. ಕಟ್ಟಡನಿಧಿಗೆ ಈ ಸಂದರ್ಭದಲ್ಲಿ ತಲಾ ಒಂದು ಲಕ್ಷ ರೂಪಾಯಿಗಳ ದೇಣಿಗೆಯನ್ನು ಘೋಷಿಸಿದ ಶ್ರೀಮತಿ ಸುಲೋಚನ ರಾವ್ ಮತ್ತು ಡಾ|| ಕೆ. ಗಿರಿಧರ ರಾವ್ ಇವರಿಗೆ ಸಂಘವು ಋಣಿಯಾಗಿದೆ.

**ವರದಿ : ಶ್ರೀ ಉಮೇಶರಾವ್ ಎರ್ಮಾಳು**

## ಮಾಂಗಲ್ಯಂ ತಂತುನಾನೇನ ....

ಕಾಸರಗೋಡು ತಾಲೂಕು ಮುಟ್ಟತ್ತೋಡಿ ಗ್ರಾಮದ ಮರ್ದಂಬೈಲು ಶ್ರೀಮತಿ ಮಂಗಲ ಗೌರಿ ಮತ್ತು ಶ್ರೀ ಚಂದ್ರಶೇಖರ ಇವರ ಪುತ್ರಿ **ವೈಜಯಂತಿ** ಹಾಗೂ ಉಡುಪಿ ತಾಲೂಕು ಹಿರಿಯಡ್ಕ ಆಳುಗ್ಗೇಲು ಗಂಗಾಧರ ರಾಯರ ಪುತ್ರ **ಪ್ರಕಾಶ್‌ಚಂದ್ರ** ಇವರ ವಿವಾಹವು ತಾ.11-6-2009 ರಂದು ಶ್ರೀಸುಬ್ರಹ್ಮಣ್ಯ ಸಭಾಭವನ, ಬಿಜೈ, ಮಂಗಳೂರು ಇಲ್ಲಿ ನೆರವೇರಿತು.

★★★★

ಶ್ರೀಮತಿ ಮತ್ತು ಶ್ರೀ ಆಳಕೆ ನಾರಾಯಣ ರಾವ್‌ರವರ ಸುಪುತ್ರ **ಪ್ರಶಾಂತಕುಮಾರ್** ಹಾಗೂ ಶ್ರೀಮತಿ ಮತ್ತು ಶ್ರೀ ಕಾರ್ನಾಡು ಭಾಸ್ಕರ ರಾವ್‌ರವರ ಸುಪುತ್ರಿ **ಅಂಜಲಿ** ಇವರ ವಿವಾಹವು ತಾ.12-6-2009ರಂದು ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಳದ ಕಲ್ಯಾಣಮಂಟಪದಲ್ಲಿ ನೆರವೇರಿತು.

★★★★

ಉಡುಪಿ ಚಿಟ್ಪಾಡಿಯಲ್ಲಿರುವ ಶ್ರೀಮತಿ ಇಂದಿರಾ ಮತ್ತು ಶ್ರೀ ದಿವಾಕರ ರಾಯರ ಪುತ್ರ **ಸುಹಾಸ್** ಹಾಗೂ ಅಂಬಲಪಾಡಿಯ ಶ್ರೀಮತಿ ಇಂದಿರಾ ಮತ್ತು ಬಪ್ಪನಾಡು ಶ್ರೀ ಕೃಷ್ಣಮೂರ್ತಿ ರಾಯರ ಪುತ್ರಿ **ರಶ್ಮಿ** ಇವರ ವಿವಾಹವು ತಾ.28-06-2009ರಂದು ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಮಂಟಪದಲ್ಲಿ ನೆರವೇರಿತು.

## ವಿಳಾಸ ಬದಲಾವಣೆ

**ವೈ. ಮೋಹನ್‌ರಾವ್**
''ದೃಷ್ಟಿ'',
2ನೇ ಅಡ್ಡರಸ್ತೆ, ಸಿ.ಪಿ.ಸಿ. ಲೇ-ಔಟ್,
ಶ್ರೀ ಪ್ರಸನ್ನ ಗಣಪತಿ ರಸ್ತೆ,
ಶ್ಯಾಮಿಲಿ ಸಂಕೀರ್ಣ ಬಳಿ,
ಅಂಬಲಪಾಡಿ, ಉಡುಪಿ - 576 103.
ಮೊಬೈಲ್ : 9964237012

★★★★


K. R. RAO
B-402, Gardenia,
Valley of Flower,
Gondecha Building,
Thakur Ville, Kandivili East,
Mumbai - 400 001.

## ಮಿಥುನ ಮಾಸದ ವಿಶೇಷ ದಿನಗಳು

| | |
|---|---|
| 16-07-2009 | ಕರ್ಕಾಟಕ ಸಂಕ್ರಮಣ |
| 18-07-2009 | ಸರ್ವೈಕಾದಶೀ |
| 19-07-2009 | ಪ್ರದೋಷಃ |
| | ಪುಷ್ಯ ನಕ್ಷತ್ರಾರಂಭ |
| 22-07-2009 | ಅಮಾವಾಸ್ಯಾ ಸೂರ್ಯಗ್ರಹಣ |
| 26-07-2009 | ನಾಗಪಂಚಮಿ |
| 31-07-2009 | ವರಮಹಾಲಕ್ಷ್ಮೀ ವ್ರತ |
| 01-08-2009 | ಸರ್ವೈಕಾದಶೀ |
| 02-08-2009 | ಆಶ್ಲೇಷಾ ನಕ್ಷತ್ರಾರಂಭ |
| 03-08-2009 | ಪ್ರದೋಷಃ |
| 06-08-2009 | ಪೂರ್ಣಿಮಾ |
| 09-08-2009 | ಸಂಕಷ್ಟಹರ ಚತುರ್ಥೀ |
| | ಚಂದ್ರೋದಯ ರಾತ್ರಿ, ಗಂ.9.14ಕ್ಕೆ |
| 16-08-2009 | ಸಿಂಹ ಸಂಕ್ರಮಣ |
| | ಸ್ಮಾರ್ತ ಏಕಾದಶೀ |
| | ಮಘಾ ನಕ್ಷತ್ರಾರಂಭ |

## ಅಭಿನಂದನೆ

### ಶ್ರೀಮತಿ ರಶ್ಮಿ ಎಸ್. ರಾವ್



ಉಡುಪಿ ಅಂಬಲಪಾಡಿಯ ಶ್ರೀಮತಿ ರಶ್ಮಿ ಸುಹಾಸ್ ರಾವ್ ಇವರು ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಎಂ.ಡಿ. (ಆಯುರ್ವೇದಿಕ್) ಪ್ರವೇಶ ಪರೀಕ್ಷೆಯಲ್ಲಿ 3ನೇ ರ್‍ಯಾಂಕ್ ಪಡೆದಿರುತ್ತಾರೆ. ಇವರು ಅಂಬಲಪಾಡಿಯ ಶ್ರೀಮತಿ ಇಂದಿರಾ ಮತ್ತು ಬಿ. ಕೃಷ್ಣಮೂರ್ತಿ ರಾವ್ ಇವರ ಸುಪುತ್ರಿ ಹಾಗೂ ಚಿಟ್ಪಾಡಿಯಲ್ಲಿ ವಾಸವಿರುವ ಶ್ರೀಮತಿ ಇಂದಿರಾ ಮತ್ತು ಸುರತ್ಕಲ್ ಶ್ರೀ ದಿವಾಕರ ರಾಯರ ಸೊಸೆ. ಇವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

### ಕು| ಕೆ. ಎ. ಚೈತ್ರ



2008-2009ನೇ ಸಾಲಿನಲ್ಲಿ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶ್ರೀ ಅಭಿನವ ರಮಾನಂದ ಪ್ರೌಢಶಾಲೆ, ಕಿಗ್ಗ ಇಲ್ಲಿನ ವಿದ್ಯಾರ್ಥಿನಿ ಕು| ಕೆ. ಎ. ಚೈತ್ರ ಇವರು 96.32% ಅಂಕಗಳನ್ನು ಗಳಿಸಿರುತ್ತಾರೆ. ಇವರು ಕಿಗ್ಗದ ಕೆ.ಎಸ್. ಅನಂತಮೂರ್ತಿ ಹಾಗೂ ಶ್ರೀಮತಿ ಉಷಾ ದಂಪತಿಗಳ ಸುಪುತ್ರಿ. ಇವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

### ಸುಬ್ರಹ್ಮಣ್ಯ ರಾವ್



ಉಜಿರೆಯ ಅನುಗ್ರಹ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಯಾದ ಸುಬ್ರಹ್ಮಣ್ಯರಾವ್ ಇವರು ಈ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.94.4 (590) ಅಂಕಗಳನ್ನು ಗಳಿಸಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆ ಯಾಗಿರುತ್ತಾರೆ. ಇವರು ಉಜಿರೆ ಕಾಲೇಜ್ ರಸ್ತೆಯ ಮಂಗಳಾ ಸ್ಟುಡಿಯೋ ಇದರ ಮಾಲಕರಾದ ಶ್ರೀ ಸೋಮಶೇಖರ ರಾವ್ ಹಾಗೂ ಶ್ರೀಮತಿ ಚಂದ್ರಿಕಾ ರಾವ್ ಇವರ ಪುತ್ರ. ಇವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

### ಅಶ್ವಿನ್ ರಾವ್



2008-2009ನೇ ಶೈಕ್ಷಣಿಕ ಸಾಲಿನಲ್ಲಿ ನಡೆದ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು ಉಜಿರೆ ಇಲ್ಲಿನ ವಿದ್ಯಾರ್ಥಿ ಅಶ್ವಿನ್‌ರಾವ್ ವಿಜ್ಞಾನ ವಿಭಾಗದಲ್ಲಿ 91% ಅಂಕಗಳನ್ನು ಗಳಿಸಿರುತ್ತಾರೆ. (ಪಿ.ಸಿ.ಎಮ್ 98.3) ಮಾತ್ರವಲ್ಲದೇ ಮೇ ತಿಂಗಳಲ್ಲಿ ನಡೆದ ಸರಕಾರಿ ಸಿ.ಇ.ಟಿ. ಪರೀಕ್ಷೆಯಲ್ಲಿ ಇಂಜಿನಿ ಯರಿಂಗ್ ವಿಭಾಗದಲ್ಲಿ 146ನೇ ರ್‍ಯಾಂಕ್‌ನ್ನು ಗಳಿಸಿದ್ದಾರೆ. ಇವರು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ರಾಗಿರುವ ಪ್ರೊ| ಶಿವರಾವ್ ಹಾಗೂ ಶ್ರೀಮತಿ ಜಾಹ್ನವಿ ದಂಪತಿಗಳ ಸುಪುತ್ರ. ಇವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

## ಸಾಮೂಹಿಕ ಗಣಹೋಮ

ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿ ತಿಂಗಳು **ಸಂಕಷ್ಟಹರ ಚತುರ್ಥಿಯಂದು** ನಡೆಯುತ್ತಿರುವ

**ಸಾಮೂಹಿಕ ಗಣಹೋಮವು**

ತಾ.09-08-2009ರಂದು ನಡೆಯಲಿದೆ.

**ಗಣಹೋಮ ಸೇವಾ ಶುಲ್ಕ ರೂ.51/-**

ಗಣಹೋಮ ಸೇವೆ ನೀಡಲು ಇಚ್ಛಿಸುವವರು ಶಾರದಾ ಮಂಟಪದ ಮೆನೇಜರ್‌ರವರನ್ನು ಸಂಪರ್ಕಿಸಲು ಕೋರಲಾಗಿದೆ.

**- ಶ್ರೀಶಾರದಾ ದೇವಸ್ಥಾನ ವೇದಿಕೆ**

ಶ್ರೀಶಾರದಾ ದೇವಸ್ಥಾನದಲ್ಲಿ
ಆಗಸ್ಟ್ ತಿಂಗಳಲ್ಲಿ
**ತಾ.08-08-2009ರ ಶನಿವಾರ**
ಸಂಜೆ ಗಂಟೆ 5-00ರಿಂದ

## ಗಮಕವಾಚನ-ಪ್ರವಚನ

ಕಾರ್ಯಕ್ರಮವು ನಡೆಯಲಿದೆ.

ವಾಚನ : ಭಾಗವತ, ಗಮಕಿ ನೀಲಾವರ **ಲಕ್ಷ್ಮೀನಾರಾಯಣರಾವ್**

ಪ್ರವಚನ : ಹವ್ಯಾಸಿ ತಾಳಮದ್ದಳೆ ಅರ್ಥಧಾರಿ, ನಾಟಕಕಾರ, ಪ್ರವಚನಕಾರ **ಶ್ರೀ ಬಾರ್ಕೂರು ನಾಗೇಶರಾವ್.**

ಸರ್ವರಿಗೂ ಆದರದ ಸ್ವಾಗತ

**- ಶ್ರೀಶಾರದಾ ದೇವಸ್ಥಾನ ವೇದಿಕೆ**

# ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

**ಡಾ| ವೈ. ಸುದರ್ಶನ ರಾವ್**

**ಪ್ರಶ್ನೆ : ಡಯಾಬಿಟಿಸ್ ರೋಗಿಯಲ್ಲಿ ಕಾಲುಗಳಿಗಾದ ಗಾಯವು ಶೀಘ್ರವೇ ಉಲ್ಬಣಗೊಳ್ಳಲು ಕಾರಣವೇನು?**

**ಉತ್ತರ :** ಡಯಾಬಿಟಿಸ್ ರೋಗಿಗಳ ದೇಹದ ಅಂಗಾಂಶಗಳಲ್ಲಿ ಕೂಡ ಸಕ್ಕರೆಯ ಅಂಶ ಜಾಸ್ತಿ ಇರುವುದರಿಂದ ಬ್ಯಾಕ್ಟೀರಿಯಾಗಳಿಗೆ ಗಾಯದಲ್ಲಿ ಬೆಳೆಯಲು ಉತ್ತಮ ವಾತಾವರಣವಿರುತ್ತದೆ. ತುಂಬಾ ವರುಷಗಳಿಂದ ಡಯಾಬಿಟಿಸ್ ಖಾಯಿಲೆ ಇದ್ದವರಿಗೆ ರೋಗ ನಿರೋಧಕ ಶಕ್ತಿಯೂ ಕಮ್ಮಿ ಇರುವುದು ಇದಕ್ಕೆ ಪೂರಕವಾಗಿ, ಇವರಿಗೆ ದೇಹದಲ್ಲಿ ಎಲ್ಲಿ ಗಾಯಗಳಾದರೂ ಅಥವಾ ದೇಹದ ಯಾವುದೇ ಮೂಲೆಯಲ್ಲಿ ರೋಗಾಣುಗಳ ದಾಳಿಯಾದರೂ ಅತಿ ಶೀಘ್ರವೇ ಉಲ್ಬಣಗೊಳ್ಳುವ ಅಪಾಯ ಇದೆ. ಅಷ್ಟು ಮಾತ್ರವಲ್ಲದೆ ಡಯಾಬಿಟಿಸ್ ರೋಗದಿಂದಾಗಿ ವಿಶೇಷವಾಗಿ ಕಾಲಿನ ರಕ್ತನಾಳಗಳ ಒಳಗೆ ಕೊಲೆಸ್ಟ್ರಾಲ್ ಶೇಖರಣೆಗೊಂಡು ರಕ್ತ ಸಂಚಾರಕ್ಕೆ ಅಡಚಣೆ ಇರುವುದೂ ಇವರಲ್ಲಿ ಸಾಮಾನ್ಯ. ಇನ್ನು ಕೆಲವರಿಗೆ ಕಾಲಿನ ಪಾದ ಹಾಗೂ ಬೆರಳುಗಳಲ್ಲಿ ಸ್ಪರ್ಶಜ್ಞಾನವೂ ಇರುವುದಿಲ್ಲ (neuropathy ). ಈ ಎಲ್ಲಾ ಕಾರಣಗಳಿಂದ ಡಯಾಬಿಟಿಸ್ ರೋಗಿಗಳ ಕಾಲುಗಳಿಗಾದ ಸಣ್ಣ ಗಾಯವೂ ಸಹಿತ ಉಲ್ಬಣಗೊಂಡು ಗ್ಯಾಂಗ್ರೀನ್ (ಕಾಲು ಕೊಳೆತು ಕಾಲನ್ನು ಕತ್ತರಿಸಿ ತೆಗೆಯದೆ ನಿರ್ವಾಹವಿಲ್ಲದ ಪರಿಸ್ಥಿತಿ) ಹಂತಕ್ಕೂ ತಲುಪಬಹುದು.

**ಪ್ರಶ್ನೆ : ಡಯಾಬಿಟಿಸ್ ರೋಗಿಯು ತನ್ನ ಕಾಲುಗಳನ್ನು ರಕ್ಷಿಸಿಕೊಳ್ಳಲು ಏನು ಮಾಡಬೇಕು?**

**ಉತ್ತರ :**

- ರಕ್ತದಲ್ಲಿನ ಸಕ್ಕರೆಯ ಅಂಶವನ್ನು ನಿಯಮಿತವಾಗಿ ಪರೀಕ್ಷಿಸುತ್ತಿದ್ದು ಸದಾ ಅದನ್ನು ಹತೋಟಿಯಲ್ಲಿಟ್ಟಿರಬೇಕು.
- ರಕ್ತದೊತ್ತಡ ಹಾಗೂ ಕೊಲೆಸ್ಟಿರಾಲ್ ಅಂಶಗಳನ್ನೂ ಹತೋಟಿಯಲ್ಲಿಟ್ಟಿರಬೇಕು.
- ಕಾಲುಗಳಿಗೆ ಗಾಯವುಂಟಾಗಬಹುದಾದ ಅಪಾಯಕಾರಿ ಕೆಲಸಗಳಲ್ಲಿ ತೊಡಗದಿರುವುದು ಉತ್ತಮ.
- ತನ್ನ ಕಾಲುಗಳಲ್ಲಿ ಏನಾದರೂ ಗಾಯಗಳಾಗಿದೆಯೆ ಎಂದು ಪ್ರತಿನಿತ್ಯ ಪರಿಶೀಲಿಸಬೇಕು. ದೃಷ್ಟಿದೋಷವಿದ್ದಲ್ಲಿ ಇನ್ನೊಬ್ಬರಾದರೂ ಈ ಕೆಲಸ ಮಾಡಬೇಕು. ಕಾಲುಗಳಿಗೆ ಪ್ರತಿದಿನ ಎಣ್ಣೆ ಹಚ್ಚುವ ಅಭ್ಯಾಸ ಒಳ್ಳೆಯದು. ಬೆಳೆದ ಉಗುರುಗಳನ್ನು ಕತ್ತರಿಸಿಕೊಳ್ಳುವಾಗ ಗಾಯಮಾಡಿಕೊಳ್ಳಬಾರದು. ಬೆರಳಿನ ಸಂದಿನ ನಂಜನ್ನು (fungus infection ) ನಿರ್ಲಕ್ಷಿಸಬಾರದು. ಕಾಲಿಗೆ ಸ್ಪರ್ಶಜ್ಞಾನ ಇಲ್ಲದಿದ್ದರೆ ಕಾಲಿಗೇನಾದರೂ ಗಾಯವಾಗಿದ್ದರೂ, ಅದು ಉಲ್ಬಣಗೊಂಡಿದ್ದರೂ, ಅದಾಗಿಯೇ ನಿಮ್ಮ ಗಮನಕ್ಕೆ ಬರುವುದಿಲ್ಲವೆಂಬುದನ್ನು ನೆನಪಿನಲ್ಲಿಡಿ.
- ಪಾದರಕ್ಷೆ ಹಾಕದೆ ಬರಿಗಾಲಿನಲ್ಲಿ ಎಂದೂ ನಡೆಯಬಾರದು. ಸಾಕ್ಸ್ ಹಾಕದೆ ಬರಿಗಾಲಿಗೆ ಬೂಡ್ಸ್ (ಶೂ) ಹಾಕಿಕೊಳ್ಳಬಾರದು. ಎಮ್.ಸಿ.ಆರ್. ಎಂಬ ವಸ್ತುವಿನಿಂದ ಮಾಡಿದ ಪಾದರಕ್ಷೆಗಳು ಅತ್ಯುತ್ತಮ. ಕಾಲುಗಳಿಗೆ ನಾಲ್ಕೂ ಸುತ್ತಿನಿಂದ ರಕ್ಷಣೆ ನೀಡುವ ಬೂಡ್ಸ್ ಧರಿಸುವುದು ಚಪ್ಪಲಿಗಿಂತ ಒಳ್ಳೆಯದು. ನಮ್ಮ ಕಾಲುಗಳಿಗೆ ಸರಿಯಾಗಿ ಹೊಂದಿಕೊಳ್ಳುವ ಕಂಪ್ಯೂಟರೀಕೃತ ಪಾದರಕ್ಷೆ ತಯಾರಿಸುವವರೂ ಇದ್ದಾರೆ.
- ಸಣ್ಣ ಗಾಯವಾಗಿದ್ದರೂ ಉತ್ತಮ ಚಿಕಿತ್ಸೆ ಮಾಡಬೇಕು. ರಕ್ತನಾಳಗಳಲ್ಲಿ ರಕ್ತಪರಿಚಲನೆಗೆ ಅಡಚಣೆ ಇದ್ದರೆ ಸಾಧ್ಯವಿದ್ದರೆ ಶಸ್ತ್ರಚಿಕಿತ್ಸೆಯ ಮೂಲಕ ಸರಿಪಡಿಸಿಕೊಳ್ಳುವುದು ಉತ್ತಮ.
- **ಎಲ್ಲಾ ಡಯಾಬಿಟಿಸ್ ರೋಗಿಗಳು ನೆನಪಿನಲ್ಲಿಡಬೇಕಾದುದೇನೆಂದರೆ ಗ್ಯಾಂಗ್ರೀನ್‌ನಿಂದಾಗಿ ಕಾಲು ಕಳೆದುಕೊಳ್ಳುವುದು ಎಂದರೆ ಡಯಾಬಿಟಿಸ್ ಖಾಯಿಲೆಗಿಂತ ಹೆಚ್ಚಾಗಿ ತಮ್ಮ ನಿರ್ಲಕ್ಷ್ಯಕ್ಕೆ ತೆರುವ ಬೆಲೆ ಎಂದು ತಿಳಿದುಕೊಂಡು ಮುಂಜಾಗ್ರತೆ ವಹಿಸುವುದು.**

ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು.
ಸಂಚಾರಿ ದೂರವಾಣಿ ನಂ. : 98451 36322

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ.

## ಡಾ| ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. 2009-2010ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು. ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ತಮ್ಮ ಹೆಸರು, ರಕ್ಷಕರ ಹೆಸರು, ಪರೀಕ್ಷೆಯ ಅಂಕಪಟ್ಟಿ ಹಾಗೂ ವಿದ್ಯಾಭ್ಯಾಸ ಮಾಡುವ/ಮುಂದುವರಿಸುವ ಬಗ್ಗೆ ದಾಖಲೆಯೊಂದಿಗೆ (ವ್ಯಾಸಂಗ ಪ್ರಮಾಣ ಪತ್ರ) ಈ ಕೆಳಗಿನ ವಿಳಾಸಕ್ಕೆ ತಾ.1-9-2009ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು.**

**ಸಂಚಾಲಕರು,** ವಿದ್ಯಾರ್ಥಿ ವೇತನ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),
ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿ - 576 102. ಫೋನ್ : 0820-2520754

## ಜ್ಯೋತಿಷ-ವಾಸ್ತು ತರಗತಿಗಳು

**ಜ್ಯೋತಿಷ, ವಾಸ್ತು ಕಲಿಯುವ ಆಸಕ್ತರಿಗೆ 19-7-2009ರಿಂದ ಉಡುಪಿಯ ಕುಕ್ಕಿಕಟ್ಟೆ ಅಜಂತಾ ಕಾಂಪ್ಲೆಕ್ಸ್‌ನಲ್ಲಿ ಪ್ರತೀ ರವಿವಾರ ಬೆಳಿಗ್ಗೆ 10.00ರಿಂದ ಮಧ್ಯಾಹ್ನ 1-00ರ ವರೆಗೆ ತರಗತಿ ನಡೆಯುತ್ತದೆ. ಮಧ್ಯಾಹ್ನ 2-00ರಿಂದ ಸಂಜೆ 6-00ರ ವರೆಗೆ ನಿಮ್ಮ ಸಮಸ್ಯೆಗಳಿಗೆ ಪ್ರ್ಯಾಕ್ಟಿಕಲ್ ಹಾಗೂ ಧಾರ್ಮಿಕ ಪರಿಹಾರಕ್ಕಾಗಿ ಸಂಪರ್ಕಿಸಿರಿ**

**ಜ್ಯೋತಿಷಿ ಕೆ. ಉಮೇಶ್ ರಾವ್**
ಮೊಬೈಲ್ : 94804 33621, 08256-209571 (ಮನೆ)
E-mail : umeshraokollipal@live.com, umeshraokollipal@yahoo.com

## ಅರ್ಚಕರು ಬೇಕಾಗಿದ್ದಾರೆ

### ಶ್ರೀ ಶಾರದಾ ದೇವಸ್ಥಾನ, ಕುಂಜಿಬೆಟ್ಟು, ಉಡುಪಿ

ಶ್ರೀ ಶಾರದಾ ದೇವಸ್ಥಾನಕ್ಕೆ ಪೂಜಾ ವಿಧಿ-ವಿಧಾನಗಳನ್ನು ಬಲ್ಲ ಓರ್ವ ಅರ್ಚಕರು ಬೇಕಾಗಿದ್ದಾರೆ. ಅರ್ಚಕರಿಗೆ ವಾಸ್ತವ್ಯಕ್ಕೆ ಮನೆ ವ್ಯವಸ್ಥೆಯಿದ್ದು, ಪೂರ್ಣಾವಧಿ ಶ್ರೀ ಶಾರದಾ ದೇವಸ್ಥಾನದಲ್ಲಿ ಇರಬೇಕಾಗುತ್ತದೆ.



*ಆಸಕ್ತರು ಕೂಡಲೇ ವಿವರಗಳೊಂದಿಗೆ ಸಂಪರ್ಕಿಸಿರಿ :*

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು , ಉಡುಪಿ-2.**
**ದೂರವಾಣಿ : 0820-2520754**


## ರಾಮಾ ಅಟೋಮೊಬೈಲ್ಸ್

ಮಾರುತಿ ವಾಹನ ತಜ್ಞರು

ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.
**ಫೋನ್ : 2454355, ಮೊಬೈಲ್ : 94485 45702**


ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ




ಉಡುಪಿ ವಿಶಿಷ್ಟ ರುಚಿಯುಳ್ಳ

## Rao's 'ಮಾತೃಛಾಯಾ'ರವರ

ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪಿಮಿಡಿ ಹಾಗೂ ಮಿಡಿ ಉಪ್ಪಿನಕಾಯಿ ಹಪ್ಪಳ ಹಾಗೂ ಸೆಂಡಿಗೆಗಳು, ಶುದ್ಧ ದನದ ತುಪ್ಪ ಹಾಗೂ ಜೇನು ತುಪ್ಪ

**-: ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :-**

**ಭಾರತ್ ಸ್ಟೋರ್ಸ್**

ರಥಬೀದಿ, ಉಡುಪಿ - 576 101. ಫೋನ್ : 2522444


## ಚಾತುರ್ಮಾಸದಲ್ಲಿ ಗುರುಗಳ ಭೇಟಿ

ನಮ್ಮ ಕುಲಗುರುಗಳಾದ ದಕ್ಷಿಣಾಮ್ನಾಯ ಶ್ರೀ ಕ್ಷೇತ್ರ ಶೃಂಗೇರಿಯ ಜಗದ್ಗುರುಗಳಾದ ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ದರ್ಶನ ಪಡೆಯಲು ಈ ವರ್ಷ ಚಾತುರ್ಮಾಸದ ಅವಧಿಯಲ್ಲಿ ಶ್ರೀ ಕ್ಷೇತ್ರ ಶೃಂಗೇರಿಯಲ್ಲಿ ಸಮಾಜ ಬಾಂಧವರು ಜೊತೆಯಾಗಿ ಸೇರಿ ಗುರುಗಳ ಆಶೀರ್ವಾದ ಪಡೆಯಲು ಉದ್ದೇಶಿಸಲಾಗಿದೆ.

ಶ್ರೀ ಗುರುಗಳು ಈ ಹಿಂದೆ ನೀಡಿದ ಆದೇಶದಂತೆ ಈ ವರ್ಷ ತಾ.09-08-2009ರಂದು (ಗಣೇಶ ಚತುರ್ಥಿಯ ಹಿಂದಿನ ಭಾನುವಾರ ಸ್ಮಾರ್ತಏಕಾದಶಿಯಾದುದರಿಂದ) ಶ್ರೀ ಗುರುಗಳ ಆಶೀರ್ವಾದಕ್ಕಾಗಿ ತೆರಳುವುದೆಂದು ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವು ನಿರ್ಧರಿಸಿದೆ. ಅದಕ್ಕಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರು ಆಗಮಿಸಬೇಕೆಂದು ಅಪೇಕ್ಷಿಸಲಾಗಿದೆ. ಆಸಕ್ತರು ಶಾರದಾ ಮಂಟಪದ ಮೆನೇಜರ್‌ರಲ್ಲಿ ವಿಚಾರಿಸಬಹುದು. (ದೂರವಾಣಿ: 0820-2520754). ಗುರುಗಳ ಭೇಟಿಗಾಗಿ ಸಮಾಜಬಾಂಧವರು ಒಂದುಗೂಡಿ ಹೋಗಲು ಆರಂಭಿಸಿ ಇದೀಗ 25 ವರ್ಷಗಳಾಗಿವೆ. ಆದುದರಿಂದ ಇದು ರಜತ ವಿಶೇಷ.

– ಕಾರ್ಯದರ್ಶಿ

## ವಧೂ-ವರರ ವೇದಿಕೆ

### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ.

ಸಮಾಜದ ವಿವಾಹ ಯೋಗ್ಯ ವಧೂ-ವರರ ನೋಂದಣಿ, ವಿವಿಧ ಮಾಹಿತಿ ಮೊದಲಾದವುಗಳನ್ನು ಆಸಕ್ತ ಹೆತ್ತವರು ಪಡೆದುಕೊಂಡು ಪರಸ್ಪರ ವಿಚಾರ ವಿನಿಮಯ ಮಾಡಲು ಅವಕಾಶವಿದೆ. ಸಮಾಜ ಬಾಂಧವರು ವೇದಿಕೆಯ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.

– ಅಧ್ಯಕ್ಷರು, ವಧೂವರರ ವೇದಿಕೆ,
ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ-2

## ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿ ಬುಧವಾರ ಸೌಂದರ್ಯಲಹರೀ ಪಾರಾಯಣ



ಆಚಾರ್ಯ ಶಂಕರಭಗವತ್ಪಾದರಿಂದ ರಚಿತವಾದ ಸೌಂದರ್ಯಲಹರೀ ಸ್ತೋತ್ರವು ಸ್ತೋತ್ರಗಳಲ್ಲಿಯೇ ವಿಶಿಷ್ಟವಾದದ್ದು. ಇದು ಶಕ್ತಿ, ವಿದ್ಯೆ ಹಾಗೂ ಲಕ್ಷ್ಮೀಸ್ವರೂಪಿಣಿಯಾದ ವಿಶ್ವಮಾತೆಯನ್ನು ಕುರಿತಾದ ಸ್ತೋತ್ರ. ಇದರ ಒಂದು ಪದ್ಯದಲ್ಲಿ ಆಚಾರ್ಯರು-''ತಾಯೀ! ನೀನು ಸರಸ್ವತೀ, ಲಕ್ಷ್ಮೀ, ಪಾರ್ವತೀ ಮಾತ್ರವಾಗಿರದೆ ಇವೆಲ್ಲವನ್ನು ಮೀರಿದ ತುರೀಯಳೂ ಪರಮಾನಂದಸ್ವರೂಪಳೂ, ಪರಬ್ರಹ್ಮನ ಶಕ್ತಿಯೂ ಆಗಿದ್ದೀಯೆ''-ಎಂದು ವರ್ಣಿಸುತ್ತಾರೆ. ಸಾಕಾರವಾಗಿ ಪೂಜೆಗೊಳ್ಳುವ ಅನೇಕ ದೇವಾನುದೇವತೆಗಳ ನಿರಾಕಾರ ಮೂಲಸ್ತೋತ್ರ ಅವಳು. ಆದ್ದರಿಂದ ಜಗನ್ಮಾತೆಯ ಅರ್ಚನೆ ಸಕಲದೇವತೆಗಳ ಅರ್ಚನೆ. ನಾನಾ ದೇವತೆಗಳ ಆಕಾರವನ್ನೇ ನೆಚ್ಚಿಕೊಂಡು ಆ ಮೂಲಕ ವಿಚ್ಛಿದ್ರತೆಯತ್ತ ಸಾಗುತ್ತಿರುವ ಸಮಾಜದಲ್ಲಿ ದೇವಿಯ ಆರಾಧನೆ ಭಾವೈಕ್ಯವನ್ನು ಭದ್ರಗೊಳಿಸುವ ದಿವ್ಯೌಷಧವಾಗಬಲ್ಲದು. ಅದೂ ಅಲ್ಲದೆ, ಇದು ಕೇವಲ ಸ್ತೋತ್ರಮಾತ್ರವಾಗಿರದೆ ಇದರಲ್ಲಿಯ ಒಂದೊಂದು ಪದ್ಯವೂ ಒಂದೊಂದು ಮಂತ್ರವಾಗಿದೆ. ಬಲ, ವಿದ್ಯೆ, ಸಂಪತ್ತು, ಸಂಗೀತ ನೈಪುಣ್ಯ, ಪುತ್ರಪ್ರಾಪ್ತಿ, ಆರೋಗ್ಯಭಾಗ್ಯ, ಜ್ವರ ಮತ್ತು ಗ್ರಹದೋಷಗಳ ನಿವಾರಣೆ ಇವುಗಳಿಗೆ ಸಾಧಕರು ಈ ಸ್ತೋತ್ರಗಳನ್ನು ಪಠಿಸಿ ಫಲವನ್ನು ಪಡೆದಿದ್ದಾರೆ. ತಮ್ಮ ಅನುಭವವನ್ನು ಇತರರೊಡನೆ ಹಂಚಿಕೊಂಡಿದ್ದಾರೆ. ಸೌಂದರ್ಯಲಹರಿಯ ಪಾರಾಯಣಕ್ಕೆ ಜಾತಿ-ಮತ-ವಯಸ್ಸು-ಲಿಂಗಗಳ ನಿಯಮವಿಲ್ಲ. ಯಾರಾದರೂ ಸರಿಯೆ ನಿಶ್ಚಲಭಕ್ತಿಯಿಂದ ಇದನ್ನು ಪಠಿಸಿ ಮನಃಶಾಂತಿಯನ್ನು ಪಡೆದುಕೊಳ್ಳಬಹುದಾಗಿದೆ ಎಂದು ವೇದಾಂತಭಾರತೀ ಮೈಸೂರು ಇವರಿಂದ ಪ್ರಕಟಿತ ''ಸೌಂದರ್ಯಲಹರೀ'' ಎಂಬ ಪುಸ್ತಕದಲ್ಲಿ ತಿಳಿಸಲಾಗಿದೆ.

ಪ್ರತಿ ಬುಧವಾರ ಸಂಜೆ ಗಂಟೆ 5-00ರಿಂದ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದ ಶ್ರೀ ಶಾರದಾ ದೇವಸ್ಥಾನದಲ್ಲಿ ಶ್ರೀ ಶಂಕರಭಗವತ್ಪಾದ ವಿರಚಿತ ಪುಣ್ಯ ಕೃತಿ ಶ್ರೀ ದೇವಿ ಸ್ತೋತ್ರ "ಸೌಂದರ್ಯಲಹರೀ" ಪಾರಾಯಣ ನಡೆಯುತ್ತಿದೆ. ನಮ್ಮ ಸಮಾಜ ಬಾಂಧವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ವಿನಂತಿ.

– ಮಹಿಳಾ ವೇದಿಕೆ


## ದೇವಿಕೃಪಾ ಏಜೆನ್ಸೀಸ್, ನಂದಿಕೂರು

**ಫೋನ್ :** 2556536 (R), 2555466 (O)



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ| ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು


Owned & Published by : K. Venugopal Rao, Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754